# ಗೀತಪ್ರೀತಿ

## ಸುಗಮ ಸಂಗೀತ ಸಿರಿ ಡಾ. ಜಯಶ್ರೀ ಅರವಿಂದ್



ಸ ರಿ ಗ ಮ ಪ ದ ನಿ

ಸಂಪಾದಕರು: ಮುರಲಿಕೃಷ್ಣ ಬೆಳಾಲು



ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ
“ಭಾವಶ್ರೀ” ಪಿ.ಕಾಳಿಂಗರಾವ್ ಪ್ರಶಸ್ತಿಗೆ
ಪುರಸ್ಕೃತರಾದಾಗ. (2016)

"ಸಾಯಿರಕ್ಷಾ ಸಂಸ್ಥೆ" ನಿರ್ಮಿಸಿದ
“ಒಂದೂರಲ್ಲಿ” ಮಕ್ಕಳ ಚಿತ್ರಕ್ಕೆ
‘ಅತ್ಯುತ್ತಮ ಸಂಗೀತ ನಿರ್ದೇಶನ’ ರಾಜ್ಯ ಪ್ರಶಸ್ತಿ
ದೊರೆತ ಕ್ಷಣ (2010–11)





‘ಜತ್ತಿ ಪ್ರಶಸ್ತಿ’ (1986)
ಭಾರತದ ಮಾಜಿ ಉಪರಾಷ್ಟ್ರಪತಿ
ಗೌರವಾನ್ವಿತ ಬಿ. ಡಿ. ಜತ್ತಿ ಅವರಿಂದ ಸನ್ಮಾನಿತರಾದಾಗ

2020 ರಲ್ಲಿ ಮುಂಬೈನಲ್ಲಿ ನಡೆದ
17ನೇ ಸುಗಮಸಂಗೀತ ಸಮ್ಮೇಳನದ
ಸರ್ವಾಧ್ಯಕ್ಷೆಯಾಗಿ ಗೌರವ ಸ್ವೀಕರಿಸಿದ ಸಂದರ್ಭ






## ಡಾ॥ ಜಯಶ್ರೀ ಅರವಿಂದ್



ಸಂಪಾದಕರು : **ಮುರಲಿಕೃಷ್ಣ ಬೆಳಾಲು**

**ಸ್ವರಸಲ್ಲಾಪ ಪ್ರಕಾಶನ**

**‘ಗೀತಪ್ರೀತಿ’ ಸುಗಮ ಸಂಗೀತ ಸಿರಿ – ಡಾ.ಜಯಶ್ರೀ ಅರವಿಂದ್**

ಸಂಪಾದಕರು: **ಮುರಲಿಕೃಷ್ಣ ಬೆಳಾಲು**

ಪ್ರಕಾಶಕರು: **ಸ್ವರಸಲ್ಲಾಪ ಪ್ರಕಾಶನ**
ಬಾಲಾಜಿ ಹಿಲ್ ವ್ಯೂ ಅಪಾರ್ಟ್‌ಮೆಂಟ್ಸ್, ನಂ.301,
3ನೇ ಮಹಡಿ, 6ನೇ ‘ಎ’ ಅಡ್ಡರಸ್ತೆ, ಇಟ್ಟಮಡು ಮುಖ್ಯರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು–560085.
ಮೊಬೈಲ್ ಸಂಖ್ಯೆ: 9845443074, 9880974918
ಇ–ಮೇಲ್: ganalahari@gmail.com

ಹಕ್ಕುಗಳು: ಪ್ರಕಾಶಕರದು

ಬೆಲೆ: ₹ 630/–

ಪುಟಗಳು: 376+24

ಪ್ರಥಮ ಮುದ್ರಣ: 2023

ಕಾಗದ ಬಳಕೆ: 70 ಜಿಎಸ್ಎಂ ಮ್ಯಾಪ್ಲಿತೋ
ಪುಸ್ತಕದ ಅಳತೆ: 1/4 ಡೆಮ್ಮಿ

ರೇಖಾಚಿತ್ರಗಳು: ಶಾಂತಯ್ಯ ಪರಡಿಮಠ
ಚಿತ್ರಕಲಾ ಶಿಕ್ಷಕರು, ದಾವಣಗೆರೆ

ಮುಖಪುಟ ವಿನ್ಯಾಸ: **ಭಾವು ಪತ್ತಾರ್**

ಒಳಪುಟ ವಿನ್ಯಾಸ ಮತ್ತು ಮುದ್ರಣ:
**ರಾಷ್ಟ್ರೋತ್ಥಾನ ಮುದ್ರಣಾಲಯ**
ಚಾಮರಾಜಪೇಟೆ, ಬೆಂಗಳೂರು
✆ : 080–29741676
ಇ–ಮೇಲ್ : rmudrana@gmail.com

# ಅರ್ಪಣೆ

ಸುಗಮ ಸಂಗೀತ ಕ್ಷೇತ್ರದ ಪಿತಾಮಹರಾದ

## ಪಿ. ಕಾಳಿಂಗ ರಾವ್







ಸುಗಮ ಸಂಗೀತದ ಅಶ್ವಿನಿ ದೇವತೆಗಳಾದ

## ಮೈಸೂರು ಅನಂತಸ್ವಾಮಿ

## ಸಿ. ಅಶ್ವತ್ಥ್

ಅವರಿಗೆ ಸಮರ್ಪಣೆ

# ಪರಿವಿಡಿ

## ಲಹರಿ – 1
### ಈ ಪುಸ್ತಕದ ಒಳಗೆ


✪ **ಸಂಪಾದಕೀಯ** 13

✪ **ಸಂಗೀತ ಸರಿಗಮ** 15
– **ಮುರಲಿಕೃಷ್ಣ ಬೆಳಾಲು,** ಕವಿ, ಸಾಹಿತಿ, ಪತ್ರಕರ್ತ


## ಲಹರಿ – 2
### ಗೀತ ಪ್ರೀತಿ


✪ **ನನ್ನ ಗೀತಪ್ರೀತಿ'**
– **ಡಾ. ಜಯಶ್ರೀ ಅರವಿಂದ್,** ಸುಗಮ ಸಂಗೀತಜ್ಞೆ 19

✪ **ನಮ್ಮ ಸಮ್ಮೇಳನಾಧ್ಯಕ್ಷೆ** 22
– **ದಿನೇಶ್ ಆರ್. ಕೆ.** ಅಧ್ಯಕ್ಷರು, ಸುಗಮ ಸಂಗೀತ ಪರಿಷತ್ತು, ಮಹಾರಾಷ್ಟ್ರ ಘಟಕ, ಮುಂಬೈ

✪ **ಸುಗಮ ಸಂಗೀತ ಸಮ್ಮೇಳನ, ಮುಂಬಯಿ –2020** 23
– **ಸಮ್ಮೇಳನಾಧ್ಯಕ್ಷರ ಭಾಷಣ, ಕಲಾಶ್ರೀ ಡಾ. ಜಯಶ್ರೀ ಅರವಿಂದ್**

✪ **ನಮ್ಮ ಸುಗಮ ಸಂಗೀತ** 32

✪ **ಗಮಕದಿಂದ ಸುಗಮ ಸಂಗೀತದೆಡೆಗೆ** 53
– **ಡಾ.ಜಯಶ್ರೀ ಅರವಿಂದ್,** ಸುಪ್ರಸಿದ್ಧ ಗಾಯಕಿ, ಸಂಗೀತ ನಿರ್ದೇಶಕಿ, ಲೇಖಕಿ ಸುಗಮ ಸಂಗೀತಜ್ಞೆ


## ಲಹರಿ – 3
### ಭಾವಮಿಲನ


✪ **ಗಮಕ ಮತ್ತು ಸುಗಮ ಸಂಗೀತದ ಸಂಬಂಧ** 58
– **ಡಾ. ವಿಜಯಮಾಲಾ ರಂಗನಾಥ್,** ಗಮಕಿ ಮತ್ತು ಲೇಖಕಿ

✪ **ಸಂಪ್ರದಾಯದ ಹಾಡುಗಳು ಮತ್ತು ಸುಗಮ ಸಂಗೀತ** 62
– **ಕೆ ಆರ್ ಅನ್ನಪೂರ್ಣ & ಕೆಆರ್‌ಎಸ್ ಮೂರ್ತಿ**
'ಹೃದಯ ಸಂಪುಟ' ಸಂಪ್ರದಾಯ ಗೀತೆಗಳ ಗಾಯಕಿ ಹಾಗೂ
ಸಂಗ್ರಹಕಾರರಾದ ಶ್ರೀಮತಿ ವಾಗೀಶ್ವರೀ ಶಾಸ್ತ್ರಿಯವರ ಮಕ್ಕಳು

✪ **ಸುಗಮ ಸಂಗೀತಕ್ಕೆ ದಾಸ ಸಾಹಿತ್ಯ ಸಂಗೀತದ ಪ್ರಭಾವ** 70
– **ಡಾ.ಮುದ್ದು ಮೋಹನ್,** ಐ.ಎ.ಎಸ್., ಪ್ರಖ್ಯಾತ ಹಿಂದೂಸ್ತಾನಿ ಗಾಯಕರು

✪ **ಸುಗಮ ಸಂಗೀತ ಮತ್ತು ಡಾ. ಜಯಶ್ರೀ ಅರವಿಂದ್ ಒಂದು ಅವಲೋಕನ** 72
– **ರವೀಂದ್ರ ನಾಯಕ್** ಸಣ್ಣಕ್ಕಿ ಬೆಟ್ಟು ಕವಿ, ಸಾಹಿತಿ

✪ **ಭಾವಗೀತೆಗೆ ಒಂದು ಪುಟ್ಟ ಪರಿಭಾಷೆ** 75
– **ಡಾ.ವಿ.ವಿ.ಗೋಪಾಲ್,** ಕವಿ, ಸಾಹಿತಿ

✪ **ಸುಗಮ ಸಂಗೀತದಲ್ಲಿ ಸಾಹಿತ್ಯ** 101
– **ಪ್ರಶಾಂತ್ ಸುಬ್ಬಣ್ಣ** – ನಿಕಟಪೂರ್ವ ಅಧ್ಯಕ್ಷರು, ಕನ್ನಡ ಸಂಘ, ಟೊರೆಂಟೊ
ಮತ್ತು "ಸ್ವಭಾವ" ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರು

✪ **ಸಂಗೀತ ಸಾಹಿತ್ಯದ ಒಂದು ಹದ** 105
**ಕೆ.ಎನ್.ಮಹಾಬಲ** ಪ್ರಖ್ಯಾತ ಪ್ರೇಮಕವಿ ಕೆ.ಎಸ್.ನರಸಿಂಹ ಸ್ವಾಮಿ ಅವರ ಸುಪುತ್ರ,
ಕವಿ ಮತ್ತು ಸಾಹಿತಿ

✪ **ಶಾಸ್ತ್ರೀಯ ಸಂಗೀತವಿಲ್ಲದೆ ಸುಗಮ ಸಂಗೀತವಿಲ್ಲ!** 108
**– ಶಾಂತಾ ಮೈಸೂರು ಅನಂತಸ್ವಾಮಿ,**
ಗಾಯಕಿ, ಪ್ರಸಿದ್ಧ ಸುಗಮ ಸಂಗೀತ ಗಾಯಕ, ಸಂಗೀತ ನಿರ್ದೇಶಕರಾದ
ಮೈಸೂರು ಅನಂತ ಸ್ವಾಮಿ ಅವರ ಧರ್ಮಪತ್ನಿ

✪ **ಕರ್ನಾಟಕದ ಗೀತಸಂಗೀತ ಕ್ಷೇತ್ರದ ಅನರ್ಘ್ಯ ಭಂಡಾರ** 111
**– ವಿದ್ಯಾವಾಚಸ್ಪತಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ**
ಪ್ರವಚನಕಾರರು, ಹರಿದಾಸ ಸಾಹಿತ್ಯ ವಿದ್ವಾಂಸರು

✪ **ಬದುಕಿನ ಹೆಜ್ಜೆಗುರುತು ಮೂಡಿಸಿದ ಸಾಧಕಿ** 114
**– ಎಚ್.ಆರ್.ಲೀಲಾವತಿ,** ಸಂಗೀತ ನೃತ್ಯ ಅಕಾಡಮಿಯ ಮಾಜಿ ಅಧ್ಯಕ್ಷರು,
ಖ್ಯಾತ ಗಾಯಕಿ, ಸಂಗೀತ ಸಂಯೋಜಕಿ

✪ **ರಾಗಾಧಾರಿತ ಸಂಗೀತ ನೀಡುವ ಡಾ.ಜಯಶ್ರೀ ಅರವಿಂದ್** 118
**– ಪಂ.ವಿನಾಯಕ ಹೆಗಡೆ,** ಟೊರೆಂಟೋ
ಸುಪ್ರಸಿದ್ಧ ಹಿಂದೂಸ್ತಾನಿ ಸಂಗೀತ ಮತ್ತು ಸುಗಮ ಸಂಗೀತ ಗಾಯಕರು,
ಬೋಧಕರು, ಸಂಗೀತ ನಿರ್ದೇಶಕರು, ಸ್ವಭಾವ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರು

✪ **ಸುಗಮ ಸಂಗೀತ ಎಂಬ "ಗೀತಾಂಜಲಿ"** 121
**– ಎಸ್ ವಿಮಲ,** ಲೇಖಕಿ, ಉಪನ್ಯಾಸಕಿ

✪ **ಕಲೆಯ ಸಿರಿ ಜಯಶ್ರೀ ಅರವಿಂದ್** 123
**– ಕೃಷ್ಣ ಪ್ರಸಾದ್** ಬಿ. ಮೈಸೂರು, ನಿವೃತ್ತ ಮುಖ್ಯೋಪಾಧ್ಯಾಯರು, ಸಾಹಿತಿ

✪ **ಗೀತೆಗೆ ವಾದ್ಯ ಸಂಯೋಜನೆಯೇ ಆಭರಣ** 129
**– ಎನ್.ಎಸ್.ಪ್ರಸಾದ್,** ಖ್ಯಾತ ಮ್ಯಾಂಡೋಲಿನ್ ವಾದಕರು, ಸಂಗೀತ ಸಂಯೋಜಕರು

✪ **ಕಾರ್ಯಕ್ರಮದ ಕಳೆ ಹೆಚ್ಚಿಸುವ ನಿರೂಪಣಾ ಕಲೆ** 132
**– ಜಿ.ಪಿ.ರಾಮಣ್ಣ,** ನಿರೂಪಕರು, ಕಲೆ–ಸಾಹಿತ್ಯ–ಸಂಸ್ಕೃತಿ–ಪರಂಪರೆಗಳ ವಾಹಕರು

✪ **ಸುಗಮ ಸಂಗೀತ, ಭಾವಗೀತೆಗೆ ಸೀಮಿತವೇ?** 138
**– ಡಾ. ಕಾ. ವೆಂ. ಶ್ರೀನಿವಾಸಮೂರ್ತಿ,** ಕವಿ, ಸಾಹಿತಿ, ವಿಮರ್ಶಕ

✪ **ಸಂಗೀತ ಕ್ಷೇತ್ರದ ಭಲೇ ಜೋಡಿ !** 146
**–ರತ್ನಮಾಲಾ ಪ್ರಕಾಶ್,** ಜನಪ್ರಿಯ ಸುಗಮ ಸಂಗೀತ ಗಾಯಕಿ

✪ **ಗಾಯಕ, ಗಾಯಕಿಯರ ಆಶ್ರಯದಾತೆ ಜಯಶ್ರೀ ಅರವಿಂದ್** 155
**– ಎಚ್. ಎಂ.ನಾಗರಾಜರಾವ್ ಕಲ್ಕಟ್ಟೆ,** ಕವಿ, ಸಾಹಿತಿ, ಚಿಂತಕ

✪ **ಕವಿ ಹೃದಯದ ಭಾವಯಾನಕ್ಕಿದೆ ಸುಗಮ ಹಾದಿ** 159
**– ಪ್ರವೀಣ್ ಡಿ.ರಾವ್,** ಖ್ಯಾತ ಸುಗಮ ಸಂಗೀತ ಕಲಾವಿದರು, ಸಂಗೀತ ನಿರ್ದೇಶಕರು

✪ **ಕವಿಗಳನ್ನು ಪ್ರೋತ್ಸಾಹಿಸುವ ಡಾ.ಜಯಶ್ರೀ ಅರವಿಂದ್** 161
**– ಡಾ. ವೇದವ್ಯಾಸ ಜೋಶಿ,** ಕವಿ, ಸಾಹಿತಿ

✪ **ಕುಂತ್ರೆ ನಿಂತ್ರೆ ಹಾಡಿಂದೇ ಧ್ಯಾನ** 164
**– ಡಾ. ಕುಶಾಲಪ್ಪ ಗೌಡ,** ನಿವೃತ್ತ ಕುಲಪತಿಗಳು, ಮದ್ರಾಸ್ ವಿಶ್ವವಿದ್ಯಾಲಯ

✪ **ನಾದದರಮನೆಯ ದೊರೆ ಅರವಿಂದ್ ಕಿಗ್ಗಾಲ್** 167
**– ಗೋವಿಂದ ಭಟ್,** ಕಲ್ಲುಕುಟ್ಟಿಮೂಲೆ, ಲೇಖಕರು, ಛಾಯಾಗ್ರಾಹಕರು

✪ **ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಗೀತ ನಿರ್ದೇಶಕಿ** 171
**–ವಿ ಮನೋಹರ,** ಸಂಗೀತ ನಿರ್ದೇಶಕ

✪ **ಅರವಿಂದ್ ಸ್ಟುಡಿಯೋ ಮೊದಲ ಪಾಠಶಾಲೆ** 174
**– ಪ್ರವೀಣ್ ಗೋಡ್ಖಿಂಡಿ,** ಖ್ಯಾತ ಕೊಳಲು ವಾದಕ, ಸಂಗೀತ ಸಂಯೋಜಕರು

- **ಗಾಯಕಿ, ಸಂಗೀತ ನಿರ್ದೇಶಕಿ, ಗೀತ ಸಾಹಿತಿ** 177
  **– ಪ್ರೇಮಲತಾ ದಿವಾಕರ್,** ಪ್ರಖ್ಯಾತ ಗಾಯಕಿ, ಲೇಖಕಿ
- **ಪ್ರತಿಭೆ, ಸೌಂದರ್ಯ, ಸದ್ಗುಣಗಳ ಸಂಗಮವೇಣಿ** 179
  **– ಎಸ್. ಪಿ. ವಿಜಯಲಕ್ಷ್ಮೀ,** ಲೇಖಕಿ, ಕವಯಿತ್ರಿ
- **ಸಕಲಕಲಾವಲ್ಲಭೆ ಡಾ. ಜಯಶ್ರೀ ಅರವಿಂದ್** 183
  **– ಭಗವಾನ್ (ದೊರೆ ಭಗವಾನ್),** ಪ್ರಸಿದ್ಧ ಚಲನಚಿತ್ರ ನಿರ್ಮಾಪಕರು, ನಿರ್ದೇಶಕರು
- **ಉದಯೋನ್ಮುಖ ಪ್ರತಿಭೆಗಳನ್ನು ಪರಿಚಯಿಸಿದ ಕಲಾಪೋಷಕಿ** 185
  **– ಎಂ.ರಕ್ಷಿತ್,** ಎಂ.ಎಸ್.ಸಿ (ಭೂವಿಜ್ಞಾನ) ಪಿ.ಜಿ.ಡಿ. (ಜಿಯೊ ಇನ್‌ಫರ್ಮ್ಯಾಟಿಕ್ಸ್)
- **"ಮುದ್ದು ಶಾರದೆ"ಯ ಸೊಬಗು** 190
  **– ರಶ್ಮಿ ಬಿ ಚಿಕ್ಕಮಗಳೂರು,** ಗಾಯಕಿ ಹಾಗೂ ಸಂಗೀತ ಉಪನ್ಯಾಸಕಿ
- **ಸುಗಮ ಸಂಗೀತವೆಂಬ ಹೂಗಳ ಮಹಾಬಳ್ಳಿ** 194
  **– ಸುಬ್ರಹ್ಮಣ್ಯ ಶಿಶಿಲ,** ಸ್ವಭಾವ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರು, ಕಲಾಪೋಷಕರು, ಟೊರಾಂಟೊ
- **ನನ್ನ ಅಕ್ಕ ಡಾ. ಜಯಶ್ರೀ ಅರವಿಂದ್** 197
  **– ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ,** ವಿಶ್ರಾಂತ ಕುಲಪತಿಗಳು, ಸಂಸ್ಕೃತ ವಿಶ್ವವಿದ್ಯಾನಿಲಯ
- **ನಾ ಕಂಡ ಮಹಿಳಾ ಸಂಗೀತ ಸಂಯೋಜಕರು** 200
  **– ಸುನೀತಾ ಅನಂತಸ್ವಾಮಿ,** ಖ್ಯಾತ ಗಾಯಕಿ, ಸಂಗೀತ ಸಂಯೋಜಕಿ
- **ಹೃದಯ ಮೀಟುವ ಗಜಲ್ ಗಾನಯಾನ** 204
  **– ಡಾ. ಮಲ್ಲಿನಾಥ ಎಸ್. ತಳವಾರ,** ಕನ್ನಡ ಪ್ರಾಧ್ಯಾಪಕರು, ಗಝಲ್ ಕವಿ
  ನೂತನ ವಿದ್ಯಾಲಯ ಪದವಿ ಮಹಾವಿದ್ಯಾಲಯ, ಕಲಬುರಗಿ
- **ನಿರೂಪಣೆಯೇ ಕಾರ್ಯಕ್ರಮದ ಜೀವಾಳ** 208
  **– ಕಲಾದೇಗುಲ ಶ್ರೀನಿವಾಸ್,** ಗಾಯಕರು, ನಿರೂಪಕರು
- **ಮುಗಿಲೆತ್ತರಕ್ಕೇರಿದ ಸಾಧನೆಯ ಹೂಗೊಂಚಲು** 212
  **– ಡಾ.ಗಿರೀಶ ಜಕಾಪುರೆ, ಕಲಬುರಗಿ,** ಕನ್ನಡ ಪ್ರಾಧ್ಯಾಪಕರು, ಗಝಲ್ ಕವಿ
- **ಡಿ.ವಿ.ಜಿ ಅವರ "ಅಂತಃಪುರ ಗೀತೆ" ಒಂದು ಸಿಹಿ ನೀರಿನ ನದಿ** 214
  **– ಕುಸುಮನಾಡಿಗ್ ರಾಮಪ್ರಸಾದ್,** ಭರತನಾಟ್ಯ ಕಲಾವಿದರು
- **ಚಲ್ಲಾಟಗಾರ ಮಾದಪ್ಪ ಹಾಡುಗಳು ಸಂಗೀತ ಲೋಕದ ಬೆರಗು** 217
  **– ಮಹದೇವ್ ಬಿಳುಗಲಿ,** ಕವಿ, ಲೇಖಕರು
- **ದಾಸರ ಪದಗಳಿಗೆ ಜಯಶ್ರೀ ಅರವಿಂದ್ ಕೊಡುಗೆ** 228
  **– ವಿದ್ವಾನ್ ಎನ್. ಶ್ರೀನಾಥ್,** ಪ್ರಖ್ಯಾತ ಕರ್ನಾಟಕ ಸಂಗೀತ ಗಾಯಕರು, ಮೈಸೂರು
- **ಡಿ.ವಿ.ಜಿ ಅವರ "ಅಂತಃಪುರ ಗೀತೆ"ಗಳ ಬೇಲೂರಿನ ಮದನಿಕೆಯರು!** 232
  **– ಡಾ. ರಾಧಿಕಾ ರಂಜಿನಿ,** ಭರತನಾಟ್ಯ ಕಲಾವಿದರು,
- **ಸುಗಮ ಸಂಗೀತ ಸಂಯೋಜನೆಯ ವೈವಿಧ್ಯ ಮತ್ತು ಮಿನುಗುತಾರೆ ಜಯಶ್ರೀ ಅರವಿಂದ್** 235
  **– ಪಂ. ಶ್ರೀಕಾಂತ ಕುಲಕರ್ಣಿ,**
  ಪ್ರಸಿದ್ಧ ಸುಗಮಸಂಗೀತ ನಿರ್ದೇಶಕರು, ಧಾರವಾಡ ಆಕಾಶವಾಣಿ ಹಿರಿಯ ಸಂಗೀತ ಸಂಯೋಜಕರು


## ಲಹರಿ – 4
## ಕವಿ ಮನಸಿನ ಮಾತು


- **ಎಲ್ಲೆಡೆ ಪ್ರತಿಭೆ ಹೂಡಿಕೆ ಮಾಡಿದ ಸಾಧಕಿ** 240
  **– ಡಾ. ಎಚ್.ಎಸ್.ವೆಂಕಟೇಶ್‌ಮೂರ್ತಿ,** ಕವಿ, ಸಾಹಿತಿಗಳು
- **ಸಾಹಿತ್ಯ–ಸಂಗೀತ ಶಾರದೆಯ ಪ್ರತಿರೂಪ ಡಾ. ಜಯಶ್ರೀ ಅರವಿಂದ್** 242
  **– ಪದ್ಮಶ್ರೀ ಡಾ.ದೊಡ್ಡರಂಗೇಗೌಡ,** ಕವಿ, ಸಾಹಿತಿಗಳು

✪ ಜಯಶ್ರೀ ಎನ್ನುವ ಮಾತೃ ಹೃದಯ 244
– ಸುಬ್ರಾಯ ಚೊಕ್ಕಾಡಿ, ಕವಿ, ಸಾಹಿತಿಗಳು

✪ ಸುಗಮಸಂಗೀತ ಕ್ಷೇತ್ರದ ಸಮರ್ಥ ಗೀತ ರಚನಾಕಾರ್ತಿ 246
– ಬಿ. ಆರ್. ಲಕ್ಷ್ಮಣರಾವ್, ಕವಿ, ಸಾಹಿತಿಗಳು

✪ ಮೆಲುನುಡಿಯ ಜಯಶ್ರೀ ಅಮ್ಮ! 248
– ಪ್ರೊ.ಡಾ.ನಾ ದಾಮೋದರ ಶೆಟ್ಟಿ, ಕವಿ, ಸಾಹಿತಿಗಳು

✪ ಭಕ್ತಿ ಭಾವಗೀತೆಗಳ ಸಂಗೀತ ಕಣಜ ಡಾ. ಜಯಶ್ರೀ ಅರವಿಂದ್ 250
– ಸ. ಜಗನ್ನಾಥ, ಕವಿ, ಸಾಹಿತಿಗಳು


## ಲಹರಿ – 5
## ಜೀವನ ಸಂಗೀತ


✪ ನನ್ನ ಮಗಳು ನನ್ನ ಹೆಮ್ಮೆ 252
– ಶ್ರೀ ರಂಗನಾಯಕಿ ಗೋವಿಂದರಾಜಯ್ಯಂಗಾರ್
ಸಾಂಪ್ರದಾಯದ ಗೀತ ರಚನಾಕಾರರು, ಗಾಯಕರು

✪ ನನ್ನ ಪ್ರೀತಿಯ ಸೋದರಿ ಜಯಶ್ರೀ 255
– ಟಿ. ಜಿ ರಂಗನಾಥ್, ಉದ್ಯಮಿ

✪ ಸ್ನೇಹಮಯಿ ಜಯಶ್ರೀ ಅಕ್ಕ 257
– ಡಾ.ರೇವತಿ ನರಹರಿ, ಲೇಖಕಿ, ಸಂಸ್ಕೃತ ಉಪನ್ಯಾಸಕಿ

✪ ನಾದಲೋಕದ ವೈದ್ಯೆ ಜಯಶ್ರೀ ಅರವಿಂದ್ 260
– ಕೆ.ಪಿ.ಆನಂದ್ ಮೈಸೂರು, ಪ್ರವರ್ತನಾಧಿಕಾರಿ, ಪ್ರಾವಿಡೆಂಟ್ ಫಂಡ್ ಆಫೀಸರ್

✪ ಸುಮಧುರ ನೆನಪುಗಳು ಅನಂತ 262
– ಡಾ. ಹರಿಣಿ ಆನಂದ್, ಲೇಖಕಿ, ಸಂಸ್ಕೃತ ಉಪನ್ಯಾಸಕರು

✪ ತಾಯಿಯೇ ಮೊದಲ ಗುರು, ಸ್ನೇಹಿತೆ 265
– ಶ್ರೀರಕ್ಷಾ ಪ್ರಿಯಾರಾಮ್, ಖ್ಯಾತ ಸುಗಮ ಸಂಗೀತ ಮತ್ತು ಚಲನಚಿತ್ರ ಹಿನ್ನೆಲೆ ಗಾಯಕಿ

✪ ಅಮ್ಮ-ಅಪ್ಪ ಎಂಬ ಅಂತರಂಗದ 2 ಮುದ್ದು ಮುಖಗಳು 267
– ಶ್ರೀಸೂಕ್ತ ಪಟ್ಟಾಭಿರಾಮನ್, ಟೊರಾಂಟೊ, ಗಾಯಕಿ

✪ ಬೆಳದಿಂಗಳಂಥಾ ನನ್ನ ಅಮ್ಮ 272
– ನಾಗರತ್ನಾ ನಾಗರಾಜ್, (ನಾನಾ), ಒಡನಾಡಿ


## ಲಹರಿ – 6
## ಸ್ನೇಹ ಸಂಪದ


✪ ಸುಗಮ ಸಂಗೀತದ ಪೋಷಕಿ ಜಯಶ್ರೀ ಅರವಿಂದ್ 276
– ನಗರ ಶ್ರೀನಿವಾಸ ಉಡುಪ, ಖ್ಯಾತ ಸುಗಮ ಸಂಗೀತ ಗಾಯಕರು

✪ ಸುಗಮ ಸಂಗೀತ ಕ್ಷೇತ್ರದ ಅಕ್ಕ 280
– ನರಸಿಂಹ ನಾಯಕ್, ಜನಪ್ರಿಯ ಗಾಯಕ, ಸಂಗೀತ ಸಂಯೋಜಕರು

✪ ಆಡೋಣ ಬನ್ನಿ ಪ್ರಖ್ಯಾತಿಯ ಡಾ. ಜಯಶ್ರೀ ಅರವಿಂದ್ 281
– ಕಸ್ತೂರಿ ಶಂಕರ್, ಖ್ಯಾತ ಗಾಯಕಿ

✪ ಸಂಗೀತ ಕ್ಷೇತ್ರಕ್ಕೆ ತಾಯಿಯಂತೆ ಬಂದವರು! 284
– ಬಿ.ಆರ್. ಛಾಯಾ, ಖ್ಯಾತ ಹಿನ್ನೆಲೆ ಗಾಯಕಿ

✪ ಮುದ್ದು ಬೀಗಿತ್ತಿ ಡಾ.ಜಯಶ್ರೀ ಅರವಿಂದ್ 285
– ಮಾಲತಿ ಶರ್ಮಾ, ಆಕಾಶವಾಣಿ 'ಎ' ಟಾಪ್ ಸುಗಮ ಸಂಗೀತ ಕಲಾವಿದೆ, ಗಾಯಕಿ, ನಿರೂಪಕಿ, ರಂಗಕಲಾವಿದೆ ಹಾಗೂ ಲೇಖಕಿ

- ಸಾವಿರಾರು ಗೀತೆಗಳನ್ನು ಮಡಿಲಿಗಿಟ್ಟ ಜಯಶ್ರೀ ಅಕ್ಕ 287
  **– ಕೆ.ಎಸ್. ಸುರೇಖಾ,** ಜನಪ್ರಿಯ ಹಿನ್ನೆಲೆ ಗಾಯಕಿ
- ಅಮ್ಮನ ಪ್ರೀತಿಕೊಡುವ ಡಾ.ಜಯಶ್ರೀ ಅರವಿಂದ್ 289
  **– ರಮೇಶ್‌ಚಂದ್ರ,** ಜನಪ್ರಿಯ ಚಲನಚಿತ್ರ ಹಿನ್ನೆಲೆ ಗಾಯಕರು
- ಸಾಂಸ್ಕೃತಿಕ ರಾಯಭಾರಿ ಜಯಶ್ರೀ ಅಕ್ಕ 290
  **– ಶಶಿಧರ ಕೋಟೆ,** ಜನಪ್ರಿಯ ಗಾಯಕರು
- **Rare Gem Of Our Kannada Bhavagethe Community** 291
  **- Praveen Duth Stephen,** Keyboard player
- ಅಪೂರ್ವ ಸಾಧಕಿ ಡಾ. ಜಯಶ್ರೀ ಅರವಿಂದ್ 293
  **– ವೀಣಾ ವಾರುಣಿ,** ಪ್ರಖ್ಯಾತ ಗಾಯಕಿ, ಸಂಗೀತ ಸಂಯೋಜಕಿ, ವೀಣಾವಾದಕಿ
- ಸದಾ ಚಟುವಟಿಕೆಯ ನಗುಮುಖದ ಮಹಿಳೆ 295
  **– ಡಾ. ಎಚ್. ಎಸ್. ಮೋಹನ್.ಸಾಗರ,** ಜನಪ್ರಿಯ ನೇತ್ರ ತಜ್ಞರು, ವೈದ್ಯ ಸಾಹಿತಿಗಳು
- ಸಂಗೀತ ಸಾಮ್ರಾಜ್ಞಿ ಡಾ.ಜಯಶ್ರೀ ಅರವಿಂದ್ 297
  **– ವೃಂದಾ ಎಸ್ ರಾವ್,** ಖ್ಯಾತ ಸುಗಮ ಸಂಗೀತ ಗಾಯಕಿ, ಸಂಘಟಕಿ, ಶಿಕ್ಷಕಿ
- ಅಕ್ಕನ ಸ್ಥಾನದಲ್ಲಿ ನಿಂತು ಪ್ರೋತ್ಸಾಹಿಸಿದ ಡಾ.ಜಯಶ್ರೀ ಅರವಿಂದ್ 299
  **– ಹೊಸಬೆಟ್ಟು ದೇವರಾಜ್ ಆಚಾರ್,** ಮ್ಯಾಂಡೊಲಿನ್ ವಾದಕರು
- ದಿಗ್ಗಜರ ಪರಂಪರೆ ಉತ್ತುಂಗಕ್ಕೇರಿಸಿದರು 300
  **– ಚಂದ್ರಿಕಾ ಗುರುರಾಜ್,** ಜನಪ್ರಿಯ ಚಲನಚಿತ್ರ ಹಿನ್ನೆಲೆ ಗಾಯಕಿ
- ಆಪ್ತ ಭಾವ. ಸರಳ ಸಂಪನ್ನ ಸ್ವಭಾವದ ಜಯಶ್ರೀ ಅರವಿಂದ್ 301
  **– ಸಾಯಿಲಕ್ಷ್ಮೀ,** ನಿವೃತ್ತ ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕರು, ಖ್ಯಾತ ಲೇಖಕಿ
- ಸಂಗೀತಾಸಕ್ತರ ಆಶ್ರಯದಾತೆ ಜಯಶ್ರೀ ಅರವಿಂದ್ 302
  **– ನಾಡೋಜ ಬಿ.ಕೆ.ಸುಮಿತ್ರ,** ಖ್ಯಾತ ಸುಗಮ ಸಂಗೀತ ಮತ್ತು ಚಲನಚಿತ್ರ ಹಿನ್ನೆಲೆ ಗಾಯಕಿ
- ಗಾನ ಕೋಗಿಲೆಗಳ ಮಾಮರ 303
  **– ಕೆ.ಆರ್ ರಾಘವೇಂದ್ರ ಆಚಾರ್ಯ,** ಮಣಿಪಾಲ, ಪ್ರಖ್ಯಾತ ಗಾಯಕರು, ಸಂಗೀತ ಸಂಯೋಜಕರು
- ಸುಗಮ ಸಂಗೀತದ ಅಕ್ಷಯಪಾತ್ರೆ 304
  **–ಆನಂದ ಮಾದಲಗೆರೆ,** ಖ್ಯಾತ ಸುಗಮ ಸಂಗೀತ ಗಾಯಕರು
- ಸಾಹಿತ್ಯ ಕ್ಷೇತ್ರದ ಅನನ್ಯ ಸಾಧಕಿ ಜಯಶ್ರೀ ಅರವಿಂದ್ 306
  **– ದಿವಾಕರ ಕಶ್ಯಪ ಟಿ ಆರ್.,** ಸುಗಮ ಸಂಗೀತ ಗಾಯಕ–ಸಂಯೋಜಕ
- ಸಂಗೀತ ಕ್ಷೇತ್ರದ ಕಲಾವಿದರ ಅಮ್ಮಾ 308
  **– ಅಮೃತ ಚಂದ್ರಶೇಖರ್,** ಲೇಖಕಿ, ಗಾಯಕಿ
- ಅರವಿಂದ್ ಸ್ಟುಡಿಯೋ ಪ್ರತಿಸ್ಪರ್ಧಿ ಸಂಸ್ಥೆಯಾಗಿರಲಿಲ್ಲ 309
  **– ಜಗನ್ನಾಥ್ ಜೆ ಪ್ರಭಾತ್.** ಪ್ರಭಾತ್ ಸ್ಟುಡಿಯೋ
- ಸುಸ್ವರ ತುಂಬಿದ ಸುಸಂಸ್ಕೃತ ಸಂಯೋಜಕಿ 310
  **– ಬಿ.ವಿ. ಶ್ರೀನಿವಾಸ್,** ಖ್ಯಾತ ಸಂಗೀತ ನಿರ್ದೇಶಕರು, ಲೇಖಕರು
- ಸಾರ್ಥಕ ಬದುಕಿನ ಮಾದರಿ ಗುರುಗಳು 311
  **– ಬೋಪಯ್ಯ ಚೋವಂಡ,** ಪತ್ರಕರ್ತರು, ವಾರ್ತಾವಾಚಕರು
- ಅಪರೂಪದ ವಜ್ರ ಜಯಶ್ರೀ ಅರವಿಂದ್ 313
  **– ಪದ್ಮಾ ಅಡಿಗ,** ಕರ್ನಾಟಕ ಶಾಸ್ತ್ರೀಯ ಸಂಗೀತಾಧ್ಯಾಪಕರು, ಖ್ಯಾತ ಗಾಯಕರು
- ಸಾವಿರಾರು ಗೀತೆಗಳ ಸಂಯೋಜಕಿ, ಸಾಧಕಿ 314
  **– ಎಂ. ಕೆ. ಜಯಶ್ರೀ,** ಖ್ಯಾತ ಸುಗಮ ಸಂಗೀತ ಗಾಯಕಿ
- ಶಾಸ್ತ್ರೀಯ, ಸುಗಮ ಸಂಗೀತದ ಅಪ್ರತಿಮ ಸಾಧಕಿ 315
  **– ಎಂ.ಶ್ರೀನಿವಾಸ್,** ನಿರ್ದೇಶಕರು, ಎಸ್.ಕೆ.ವಸುಮತಿ, ರಾಗತರಂಗ ಮೈಸೂರು

✪ **ಸಾಂಸ್ಕೃತಿಕ ಕ್ಷೇತ್ರದ ಓರ್ವ ಗಾಡ್ ಮದರ್** 317
**– ಮಂಜುನಾಥ ಕಾಮತ್,** ಚಿಕ್ಕಮಗಳೂರು, ಸುಗಮ ಸಂಗೀತ ಗಂಗಾ ಸುಗಮ ಸಂಗೀತ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು, ಕಲಾ ಪೋಷಕರು

✪ **ನನ್ನ ಪ್ರೀತಿಯ ದೊಡ್ಡಮ್ಮ** 319
**– ಪಂಚಮ್ ಹಳಿಬಂಡಿ,** ಜನಪ್ರಿಯ ಸುಗಮ ಸಂಗೀತ ಗಾಯಕರು

✪ **ಸಂಗೀತ, ಸಾಹಿತ್ಯ ಜ್ಞಾನ ನೀಡುವ ಮಾರ್ಗದರ್ಶಕಿ** 321
**– ಮೂಡಲ್ ಕುಣಿಗಲ್ ಕೆರೆ ಗೀತೆ ಖ್ಯಾತಿಯ ರಾಮ್ ಪ್ರಸಾದ್,** (ಯು.ಎಸ್.ಎ.) ಯುಎಸ್ಎ, ಚಲನಚಿತ್ರ ಹಿನ್ನೆಲೆ ಗಾಯಕರು, ಸಂಗೀತ ಸಂಯೋಜಕರು.

✪ **ಸುಗಮ ಸಂಗೀತದಲ್ಲೇ ಡಾಕ್ಟರೇಟ್ ಪಡೆದ ಧೀಮಂತೆ** 322
**– ಕೃಷ್ಣ ಪ್ರಸಾದ್,** ಮೆಲ್ಬೋರ್ನ್, ಆಸ್ಟ್ರೇಲಿಯಾ, ಕವಿ, ಸಾಹಿತಿ

✪ **ಸಂಪ್ರದಾಯ ಕೃತಿಗಳ ಜ್ಞಾನ ಭಂಡಾರ** 324
**– ಸೌಮ್ಯಾ ಕೃಷ್ಣ,** ವರ್ಜೀನಿಯಾ, ಖ್ಯಾತ ಗಾಯಕಿ

✪ **ಶೃಂಗೇರಿ ಶಾರದೆಯ ಪ್ರತಿರೂಪ – ಡಾ. ಜಯಶ್ರೀ ಅರವಿಂದ್** 326
**–ಡಾ. ವೇಮಗಲ್ ನಾರಾಯಣಸ್ವಾಮಿ,** ಜನಪದ ಗಾಯಕರು ಮತ್ತು ವೇಮಗಲ್ ಪ್ರತಿಷ್ಠಾನದ ಅಧ್ಯಕ್ಷರು

✪ **ಅಮ್ಮನೆಂಬ ಸಂಗೀತ ಸಾಗರ** 329
**– ಮೃತ್ಯುಂಜಯ ದೊಡ್ಡವಾಡ,** ಸುಗಮ ಸಂಗೀತ ನಿರ್ದೇಶಕ, ಗಾಯಕ ಹಾಗೂ ಅಧ್ಯಕ್ಷ ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ

✪ **ಸುಗಮ ಸಂಗೀತದಲ್ಲಿ ಮಹಿಳಾ ಸಂಘಟನೆ** 334
**– ಹೇಮಪ್ರಸಾದ್,** ಗಾಯಕಿ, ಸಂಘಟಕಿ, ನಿರೂಪಕಿ


## ಲಹರಿ – 7
## ಹಾರೈಕೆಗಳ ಹೂಗೊಂಚಲು


✪ **ಸಂಗೀತ ಸಂಯೋಜಕಿ ಮನಶ್ಶಾಸ್ತ್ರಜ್ಞೆ ಜಯಶ್ರೀ ಅರವಿಂದ್** 337
**– ಶ್ರೀನಿವಾಸ ಜಿ.ಕಪ್ಪಣ್ಣ,** ರಂಗ ನಿರ್ದೇಶಕರು ರಂಗಕರ್ಮಿ

✪ **ಮೊದಲಿಗೆ ಮಾತೃಹೃದಯಿ, ಸರಳತೆಯ ಮಹಾಮೂರ್ತಿ** 339
**– ನವೀನ್ ಮಂಜುನಾಥ್,** ಕವಿ, ಲೇಖಕರು

✪ **ಗಾಯಕರಿಗೆ ಫೇಸ್ಬುಕ್ ವೇದಿಕೆ ಕಲ್ಪಿಸಿದರು** 342
**– ರಾಜೇಶ್ ಶ್ಯಾನುಭೋಗ್ ಬಾರ್ಕೂರು,** ಪಿ.ಕಾಳಿಂಗ ರಾವ್ ಅವರ ಮೊಮ್ಮಗ, ಪ್ರಖ್ಯಾತ ಗಾಯಕರು, ಸಂಘಟಕರು ಮತ್ತು ನಿರೂಪಕರು

✪ **ಸಂಗೀತ ಕ್ಷೇತ್ರದಲ್ಲಿ ಮೈಲಿಗಲ್ಲು ಸಾಧಿಸಿದ ಸಾಧಕರು** 344
**– ನಂದಾ ವೆಂಕಟ್,** ಪ್ರಖ್ಯಾತ ಗಾಯಕಿ, ಶಿಕ್ಷಕಿ, ಮಿಲ್ಟನ್. ಒಂಟಾರಿಯೋ, ಕೆನಡಾ

✪ **ಹೊಸಗಾನದ ಹೊಸ ತನನದ ಡಾ.ಜಯಶ್ರೀ ಅರವಿಂದ್.** 347
**– ಮಧು ದುಗ್ಗನಹಳ್ಳಿ,** ಉಪನ್ಯಾಸಕರು, ಕಲಾರಾಧಕರು

✪ **ಡಾ.ಜಯಶ್ರೀ ಅರವಿಂದ್ ಸಂಗೀತ ಕ್ಷೇತ್ರದ ಸುಗಂಧ** 349
**– ಸಂಧ್ಯಾ ಭಟ್,** ಲೇಖಕಿ, ನಿರೂಪಕಿ

✪ **ಸುಗಮ ಸಂಗೀತದ ಸಂಪನ್ಮೂಲ ವಿದ್ವಾಂಸೆ** 350
**– ಸುಗ್ಗನಹಳ್ಳಿ ಷಡಕ್ಷರಿ.,** ನೃತ್ಯಗಾರರು, ನಿರೂಪಕರು, ಲೇಖಕರು

✪ **"ಸಂಗೀತ ಲೋಕದ ಅನಭಿಷಿಕ್ತ ಸಾಮ್ರಾಜ್ಞಿ"** 352
**– ಭವಾನಿ ಲೋಕೇಶ್ (ಬಾನಿ),** ನಿರೂಪಕಿ, ಮಂಡ್ಯ

✪ **ನಿರಾಡಂಬರ ಭೂಷಿತೆ ಡಾ.ಜಯಶ್ರೀ ಅರವಿಂದ್** 353
**– ಕೆ. ಪುನೀತ್, ಅಧ್ಯಕ್ಷರು, 'ಭಾವನಾಂತರಂಗ' ಟ್ರಸ್ಟ್, ಬೆಂಗಳೂರು**

✪ **ಬಹುಮುಖ ಪ್ರತಿಭೆಯ ಡಾ. ಜಯಶ್ರೀ ಅಮ್ಮ** 354
**– ರಮ್ಯ ಸುಮಂತ್,** ಗಾಯಕಿ, ಬ್ಯಾಂಕ್ ಉದ್ಯೋಗಿ

✪ **ಸಂಗೀತ, ಸತ್ಸಂಗಗಳಿಂದ ಸಂತೋಷ ನೀಡುವ ಮಹಿಳೆ** 355
**– ಸುನಂದ ಶ್ಯಾಮಸುಂದರ ಭಟ್,** ಕರಕುಶಲ ಕಲಾವಿದರು

✪ **ಸುಗಮ ಸಂಗೀತದ ಮೇರು ಪರ್ವತ** 356
**– ದಯಾ ಸುಬ್ಬಯ್ಯ,** ಖ್ಯಾತ ಲೇಖಕರು, ಕಾದಂಬರಿಕಾರ್ತಿ

✪ **ಕನ್ನಡಿಗರು ಮರೆಯಲಾಗದ ಸಂಗೀತ ಸರಸ್ವತಿ** 357
**– ಸಿದ್ದು ಕನಕಪುರ,** ಕ್ರೀಡಾಪಟು

✪ **ಅದ್ಭುತ ಸಂಗೀತ ಸಂಯೋಜಕಿ, ಗಾಯಕಿ** 359
**– ಇಂದು ಅನಂತ್,** ಮೈಸೂರು, ಸುಗಮ ಸಂಗೀತ ಶಿಕ್ಷಕರು, ಖ್ಯಾತ ಗಾಯಕರು

✪ **ಅವಕಾಶ ನೀಡಿ ಪ್ರೋತ್ಸಾಹಿಸಿದ ಅಮ್ಮಾ** 360
**– ಮಂಜುನಾಥ್ ಕೆ. ಎನ್ (ರತ್ನ ಮಂಜು)–** ಪ್ರಖ್ಯಾತ ಗಾಯಕರು

✪ **ಸಂಗೀತ ಕ್ಷೇತ್ರದ ಸಾಧನೆಗೈದ ಧೀಮಂತ ಮಹಿಳೆ** 361
**– ಹೆಚ್. ಎಸ್ ಜಯ,** ಚಾಮುಂಡಿಪುರಂ, ಮೈಸೂರು, ಸಿಎಫ್‌ಟಿಆರ್‌ಐ, ನಿವೃತ್ತ ಅಧಿಕಾರಿ

✪ **ಜನಪದ ಶೈಲಿಯ ಹಾಡು ರಚಿಸಿ ಹತ್ತಿರವಾದರು** 362
**– ಕಾರ್ತಿಕ್ ಕುಮಾರ್.ಬಿ,** ಕನ್ನಡ ಶಿಕ್ಷಕರು, ಮೈಸೂರು

✪ **ಎಂಟು ಭಾಷೆಗಳ ಸಾಹಿತ್ಯಕ್ಕೆ ಸಂಗೀತ ನೀಡಿದ ಪ್ರತಿಭಾನ್ವಿತೆ** 363
**– ಆರ್. ಗುರುಪ್ರಸಾದ್,** ಸುಗಮ ಸಂಗೀತ ಗಾಯಕರು, ಬೋಧಕರು, ತುಮಕೂರು

✪ **ನಗು ಮುಖದ ಶಾರದೆ ಜಯಶ್ರೀ ಅಮ್ಮ** 366
**– ಅಮಿತ್ ಕುಮಾರ್ ಆರ್. ಪಿ.,** ಮೈಸೂರು, ಕಲಾಭಿಮಾನಿ, ಲೇಖಕ

✪ **ಅಮ್ಮಾ ಎನ್ನುವ ಅದ್ಭುತ ಶಕ್ತಿ** 367
**– ಮಹೇಂದ್ರ ಗಣಪತಿ,** ಗಾಯಕರು

✪ **ಪದದವ್ವನಿಗೊಂದು ಪದ–ಶುಭಾಶಯ** 368
**– ಅನುರಾಗ ಗದ್ದಿ,** ಹಿಂದೂಸ್ತಾನಿ, ಸುಗಮ ಸಂಗೀತ ಗಾಯಕ ಮತ್ತು ಶಿಕ್ಷಕ


## ಲಹರಿ – 8
## ಕವಿತಾ ಹಾರೈಕೆ


✪ **ಡಾ. ಹೆಚ್.ಎಸ್. ವೆಂಕಟೇಶಮೂರ್ತಿ,** 'ಜನಪ್ರೀತಿಯ ಕವಿ', ಸಾಹಿತಿ 370
✪ **ಪದ್ಮಶ್ರೀ ಡಾ. ದೊಡ್ಡರಂಗೇಗೌಡ,** ಪ್ರಖ್ಯಾತ ಗೀತರಚನಾಕಾರರು, ಕವಿ ಸಾಹಿತಿ 371
✪ **ಸುಬ್ರಾಯ ಚೊಕ್ಕಾಡಿ,** ಕವಿ, ಸಾಹಿತಿ 372
✪ **ಡಾ. ನಾ. ದಾಮೋದರ ಶೆಟ್ಟಿ,** ಪ್ರಖ್ಯಾತ ಕವಿ, ಅನುವಾದಕರು 373
✪ **ರವೀಂದ್ರ ನಾಯಕ್ ಸಣ್ಣಕ್ಕಿಬೆಟ್ಟು,** ಜನಪ್ರಿಯ ಕವಿ 374
✪ **ಮುರಲಿ ಕೃಷ್ಣ, ಬೆಳಾಲು,** ಕವಿ, ಸಾಹಿತಿ, ಪತ್ರಕರ್ತ 375
✪ **ಸುಧಾಕರ ಭಟ್,** ಕವಿಗಳು, ಆಧ್ಯಾತ್ಮ ಚಿಂತಕರು 376


## ಲಹರಿ – 9


**ನೆನಪಿನ ಚಿತ್ರರಂಗೋಲೆ** 377–400



# ಗೀತ ಪ್ರೀತಿ

ಸುಗಮ ಸಂಗೀತ ಸಿರಿ

## ಡಾ. ಜಯಶ್ರೀ ಅರವಿಂದ್





# ಲಹರಿ – 1
## ಈ ಪುಸ್ತಕದ ಒಳಗೆ



### ಸಂಪಾದಕೀಯ

–ಮುರಳಿಕೃಷ್ಣ ಬೆಳಾಲು
*ಸಂಪಾದಕರು, ಕವಿ, ಸಾಹಿತಿ, ಪತ್ರಕರ್ತ*

ಸಂಗೀತದ ಪ್ರಕಾರಗಳಲ್ಲಿ ಸುಗಮ ಸಂಗೀತಕ್ಕೆ ವಿಶಿಷ್ಟ ಸ್ಥಾನಮಾನವಿದೆ. ಇದು ಬೇರಾವುದೇ ಭಾಷೆಯಲ್ಲೂ ಕಾಣಸಿಗುವುದಿಲ್ಲ. ಇಂತಹ ಸುಗಮ ಸಂಗೀತ ಕ್ಷೇತ್ರದ ಎಲ್ಲ ಮಜಲುಗಳಲ್ಲಿ ಸೇವೆ ಸಲ್ಲಿಸಿ ಅದರ ಆಳ, ಉದ್ದ, ಅಗಲ, ವ್ಯಾಪ್ತಿ ಎಲ್ಲ ಜ್ಞಾನವನ್ನು ಹೊಂದಿರುವವರು ಕಲಾಶ್ರೀ ಡಾ. ಜಯಶ್ರೀ ಅರವಿಂದ್. ಅವರೊಂದು ನಡೆದಾಡುವ ವಿಶ್ವಕೋಶ. ಈ ಕ್ಷೇತ್ರದಲ್ಲಿ ಅವರ ಜ್ಞಾನ ಸಂಪತ್ತು, ಕೊಡುಗೆ ಅಗಾಧ. ಅವರು ಪತಿ ಅರವಿಂದ್ ಕಿಗ್ಗಾಲ್ ಜತೆ ಸೇರಿ ಅರವಿಂದ್ ಸ್ಟುಡಿಯೋ ಕಟ್ಟಿದ ರೀತಿ, ಸಂಗೀತವನ್ನು ಪೊರೆದ ಪರಿ. ಅಮ್ಮನಂತೆ ಕಲಾವಿದರನ್ನು ಬೆಳೆಸಿದ ಹಾದಿ ಎಲ್ಲವೂ ರೋಚಕ. ಆ ಎಲ್ಲ ದಾಖಲೆಗೆ ಯೋಗ್ಯವಾದ ಸಂಗತಿಗಳು ಇಲ್ಲಿ "ಗೀತಪ್ರೀತಿ"ಯನ್ನು ಉಂಟು ಮಾಡುವಂತದ್ದಾಗಿದೆ.

ಇವೆಲ್ಲವೂ ನನ್ನನ್ನು ಅತಿಯಾಗಿ ಕಾಡಿದ, ತಿಳಿದುಕೊಳ್ಳಬೇಕೆಂಬ ಕುತೂಹಲಕ್ಕೆ ಕಾರಣವಾದ ಅಂಶಗಳು. ಡಾ.ಜಯಶ್ರೀ ಅರವಿಂದ್ ಅವರನ್ನು ಕುರಿತು ಅರಿತು, ಅವರು ಕ್ಷೇತ್ರಕ್ಕೆ ಕೊಟ್ಟ ಕಾಣಿಕೆ ಎಲ್ಲವನ್ನು ಒಂದೆಡೆ ದಾಖಲಿಸಿದರೆ ಹೇಗೆ ಎಂಬ ಯೋಚನೆ ನನಗೆ ಬಂತು. ಅದು ಮುಂದೆ ಸುಗಮ ಸಂಗೀತದ ಅಧ್ಯಯನ ಮಾಡುವವರಿಗೆ ದಾರಿದೀಪವಾಗಬಲ್ಲುದು ಎನ್ನಿಸಿತು. ಹಾಗಾಗಿ ನಾನು ಡಾ. ಜಯಶ್ರೀ ಅರವಿಂದ್ ಅವರನ್ನು ನಿಮ್ಮದೊಂದು ಅಭಿನಂದನಾ ಗ್ರಂಥ ತಂದರೆ ಚೆನ್ನಾಗಿರುತ್ತದೆ ಎಂದೆ. ಅದಕ್ಕೆ ಮೊದಲು ' ನಮ್ಮದೆಲ್ಲಾ ಯಾಕೆ? ಎಂದು ಬಹಳ ಸಂಕೋಚದಿಂದ ಕೇಳಿದರು. ಕೊನೆಗೆ ನನ್ನ ಕೋರಿಕೆಗೆ ಮಣಿದು ಒಪ್ಪಿಗೆ ಕೊಟ್ಟರು.

ಇದು ಕೇವಲ ಅಭಿನಂದನಾ ಗ್ರಂಥವಲ್ಲ. ಇದರಲ್ಲಿ ಜ್ಞಾನದ ಹಸಿವಿರುವವರಿಗಾಗಿ ಅಧ್ಯಯನಕ್ಕೆ ಪೂರಕವಾದ ಮಾಹಿತಿಯಿದೆ. ಅನುಭವದ ಹೂರಣವುಳ್ಳ ಹೋಳಿಗೆಯ ರುಚಿಯಿದೆ. ಕವಿಗಳ, ಕಲಾವಿದರ, ಸ್ನೇಹಿತರ, ಬಂಧುವರ್ಗದವರ ಎಲ್ಲರ ಹಾರೈಕೆಗಳಿವೆ. ಪ್ರಪಂಚಾದ್ಯಂತದ ನೂರಾರು ಪರಿಣಿತರು, ತಜ್ಞರು, ಅನುಭವಿಗಳು ಕಟ್ಟಿಕೊಟ್ಟ ಜ್ಞಾನಾನುಭವದ ಕಣಜವಿದೆ. ಇದೆಲ್ಲವೂ ಸಾಧ್ಯವಾಗಿಸಿದ್ದು ಡಾ. ಜಯಶ್ರೀ ಅರವಿಂದರ ನೆರವು, ಸಲಹೆ, ಮಾರ್ಗದರ್ಶನ ಸಿಕ್ಕಿದ್ದರಿಂದ ಎಂದರೆ ತಪ್ಪಲ್ಲ. ಹಾಡಬಲ್ಲ ಗೀತೆಗಳನ್ನಷ್ಟೇ ಬರೆಯಬಲ್ಲ ನನಗೆ ಅದರ ಒಳಹೊರಗುಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ಈ ಕೃತಿ ನೆರವಾಯಿತು.

ಅವರು ಈ ಕೃತಿಯನ್ನು ಹೊರತರುವ ಪ್ರತಿ ಹಂತದಲ್ಲೂ ನನಗೆ ಬೇಕಾದ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು, ನೆರವು ನೀಡಿದ್ದನ್ನು ನಾನಿಲ್ಲಿ ಸ್ಮರಿಸಲೇ ಬೇಕು. ಅವರ ಪ್ರೀತಿ ವಿಶ್ವಾಸದ ಸಹಕಾರ, ಪ್ರೋತ್ಸಾಹದಿಂದಲೇ ಇಂದು "ಗೀತ ಪ್ರೀತಿ ಸುಗಮ ಸಂಗೀತದ ಸಿರಿ ಡಾ. ಜಯಶ್ರೀ ಅರವಿಂದ್' ಎಂಬ ಸಂಪಾದನಾ ಗ್ರಂಥ ಹೊರಬರಲು ಸಾಧ್ಯವಾಗಿದೆ. ಈ ಸಂಪಾದನಾ ಗ್ರಂಥಕ್ಕೆ ಲೇಖನ ಬರೆದುಕೊಡಿ ಎಂದು ಕೇಳಿದಾಗ ಎಲ್ಲರೂ ಪ್ರೀತಿಯಿಂದ ಬರೆದುಕೊಟ್ಟು ಸಹಕರಿಸಿದ್ದಾರೆ. ಈ ಪುಸ್ತಕದಿಂದಾಗಿ ಅವರೆಲ್ಲರ ಆತ್ಮೀಯತೆ, ಒಡನಾಟ ನನಗೆ ಸಿಕ್ಕಿತು. ಸುಗಮ ಸಂಗೀತವೆಂದರೆ ಭಾವಗೀತೆಯೊಂದೇ ಅಲ್ಲ. ಜಾನಪದಗೀತೆ, ಗಮಕ, ಸಂಪ್ರದಾಯದ ಗೀತೆಗಳು, ರಂಗಗೀತೆ, ವಚನ, ದಾಸರಪದ, ಭಕ್ತಿಗೀತೆ, ಶಿಶುಗೀತೆ, ಭಾವಗೀತೆ, ಗಜಲ್...ಹೀಗೆ ಎಲ್ಲ ಸುಗಮ ಸಂಗೀತದ ಪ್ರಕಾರಗಳ ಮಾಹಿತಿ, ಜತೆಗೆ ಸೌಂಡ್ ಎಂಜಿನಿಯರಿಂಗ್, ರಾಗ ಸಂಯೋಜನೆ, ಸಾಹಿತ್ಯ.... ಎಲ್ಲದರ ಒಳನೋಟಗಳ ಒಳತೋಟಿ ಇದರಲ್ಲಿ ಅಡಕಗೊಂಡಿವೆ. ಅವೆಲ್ಲವನ್ನೂ ಒಂದೆಡೆ ಒಟ್ಟುಗೂಡಿಸುವ ಕೆಲಸ ಇಲ್ಲಿ ಮಾಡಿದ್ದೇನೆ. ಇದು ಲೇಖನಗಳ ಹೂಮಾಲೆಯಾಗಿದೆ. ಅದರಲ್ಲಿ ಜ್ಞಾನದ ಘಮದ ಕಂಪು ಹರಡಿದೆ. ಇಲ್ಲಿ ಕೃತಿಯ ಸಂಪಾದಕನಾಗಿ

ಲೇಖನಗಳನ್ನೆಲ್ಲಾ ಸಮಗ್ರ ಮಜಲುಗಳಲ್ಲಿ ಅಡಕಗೊಳಿಸಿ, ಸಂಗ್ರಹಿಸಿ ನಿಮ್ಮ ಮುಂದಿಡುವ ಪ್ರಯತ್ನ ಮಾಡಿದ್ದೇನೆ. ಸ್ವರ ಸಲ್ಲಾಪ ಪ್ರಕಾಶನವು ಈ ಕೃತಿಯನ್ನು ಹೊರತರುತ್ತಿದ್ದು, ಸಂಗೀತಾಸಕ್ತರ ಕೈಗಿಡುತ್ತಿದೆ.

ಇದು ಪ್ರತಿಯೊಂದು ಸುಗಮ ಸಂಗೀತ ಶಾಲೆಯ, ಕಲಾವಿದರ, ಆಸಕ್ತರೆಲ್ಲರ ಕೈಸೇರಬೇಕು. ಸುಗಮ ಸಂಗೀತ, ಅದರ ಮಹತ್ವ, ವ್ಯಾಪ್ತಿ ಎಲ್ಲರೂ ಅರಿವಂತಾಗಬೇಕು ಎಂಬ ಕಲ್ಪನೆಯೊಂದಿಗೆ ಈ ಗ್ರಂಥವನ್ನು ಹೊರತರಲಾಗುತ್ತಿದೆ. ಇದರಲ್ಲಿ ಡಾ. ಜಯಶ್ರೀ ಅರವಿಂದ್ ಅವರ ಸಾಧನೆ, ಕೊಡುಗೆ, ಅವರ ಜ್ಞಾನವನ್ನು ತಿಳಿಸುವುದು ಪ್ರಧಾನವಾದ ಅಂಶವಾದರೆ, ಸುಗಮ ಸಂಗೀತದ ಕ್ಷೇತ್ರ ವ್ಯಾಪ್ತಿಯೇ ಪ್ರಾಧಾನ್ಯವುಳ್ಳ ವಿಷಯವಾಗಿದೆ. ಅದೆಲ್ಲವನ್ನೂ ಇಲ್ಲಿ ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡಿದ್ದೇನೆ.

ಗೀತ ಪ್ರೀತಿ ಗ್ರಂಥವನ್ನು ಸುಂದರವಾಗಿ ಹೊರತರುವಲ್ಲಿ ಸಾಕಷ್ಟು ಸಹೃದಯರ ಪರಿಶ್ರಮ ಸಹಕಾರವಿದೆ. ಮೊದಲನೇಯದಾಗಿ ನಮ್ಮ ಹೆಮ್ಮೆಯ ಮುದ್ರಣ ಸಂಸ್ಥೆಯಾದ ರಾಷ್ಟ್ರೋತ್ಥಾನ ಮುದ್ರಣಾಲಯಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಖಜಾಂಚಿಗಳಾದ ನಾರಾಯಣ್, ಹಾಗೂ ವ್ಯವಸ್ಥಾಪಕರಾದ ನಾಗೇಂದ್ರ, ಪುಟ ವಿನ್ಯಾಸಗೊಳಿಸಿದ ಸುಮನಾ ವಿ. ಹೆಗಡೆ ಅವರು ಗ್ರಂಥವು ಉತ್ತಮವಾಗಿ ಮೂಡಿಬರಲು ನೆರವಾಗಿದ್ದಾರೆ. ಹಾಗೆಯೇ ಕಲಾವಿದರಾದ ಭಾವು ಪತ್ತಾರ್ ಅವರು ಮುಖಪುಟ ವಿನ್ಯಾಸದ ಮೂಲಕ ಕಳೆಗಟ್ಟುವಂತೆ ಮಾಡಿದ್ದಾರೆ. ಅರವಿಂದ್ ಕಿಗ್ಗಾಲ್ ಅವರ ಮಾರ್ಗದರ್ಶನವನ್ನು ಎಂದಿಗೂ ಮರೆಯಲಾಗದು. ಅಲ್ಲದೆ ಪುಸ್ತಕ ಹೊರತರುವ ಹಾದಿಯಲ್ಲಿ ಚಿತ್ರಕಲಾವಿದರಾದ ಹರ್ಷ ಕಾವೇರಿಪುರ, ಶಾಂತಯ್ಯ ಪರಡಿಮಠ ಅವರನ್ನೂ ಇಲ್ಲಿ ನೆನೆಯುತ್ತೇನೆ. ರಕ್ಷಿತ್ ಎಂ. ಅವರು ನೆನಪಿನ ಚಿತ್ರರಂಗೋಲಿಯನ್ನು ಬಿಡಿಸುವಲ್ಲಿ ಜವಾಬ್ದಾರಿ ತೆಗೆದುಕೊಂಡು ಪ್ರೀತಿಯಿಂದ ಸಹಕರಿಸಿದ್ದಾರೆ. ಇನ್ನು ಅನಂದ್ ಕೆ.ಪಿ ಮೈಸೂರು, ಶ್ರೀರಕ್ಷಾ ಪ್ರಿಯಾರಾಮ್, ಶ್ರೀಸೂಕ್ತ ಪಟ್ಟಾಭಿರಾಮನ್, ರೇವತಿ ನರಹರಿ, ಹರಿಣಿ ಆನಂದ್ ಅವರೂ ಬೆಂಬಲವಾಗಿ ನಿಂತಿದ್ದಾರೆ. ಇಷ್ಟೇ ಅಲ್ಲ. ಈ ಗ್ರಂಥದ ಸಂಪಾದಕನಾಗಿ ಸದಾ ನನಗೆ ಆಶೀರ್ವದಿಸಿ, ಸಲಹೆ ಸೂಚನೆ ನೀಡಿದ ಪದ್ಮಶ್ರೀ ಡಾ.ದೊಡ್ಡರಂಗೇಗೌಡ ಅವರಿಗೆ ನನ್ನ ಮನದುಂಬಿದ ನಮನಗಳು.

ಗೀತ ಪ್ರೀತಿ ಪುಸ್ತಕದಲ್ಲಿ ಲೇಖನವನ್ನು ಬರೆದುಕೊಟ್ಟ ಎಲ್ಲರ ಪ್ರೀತಿ ಅಡಗಿದೆ. ಇದೊಂದು ಅಭಿನಂದನಾ ಗ್ರಂಥವಾದರೂ ಸುಗಮ ಸಂಗೀತದ ಸಂಗ್ರಹ ಯೋಗ್ಯ ಮಾಹಿತಿಯುಕ್ತ ಕೃತಿಯಾಗಿ ಇಲ್ಲಿ ಅನಾವರಣಗೊಂಡಿದೆ. ಹೀಗೆ ಎಲ್ಲರ ಪ್ರೀತಿಯಿಂದ ಸೃಜಿಸಿದ ಈ ಹೊತ್ತಿಗೆಯು ಎಲ್ಲರ ಕೈಗೆ ತಲುಪಿದರೆ, ಅದೇ ನಮ್ಮ ಶ್ರಮಕ್ಕೆ ಸಿಗಬಹುದಾದ ಪ್ರತಿಫಲ. ಪ್ರತ್ಯಕ್ಷ ಪರೋಕ್ಷವಾಗಿ ನೆರವಾದ ಎಲ್ಲರಿಗೂ ಈ ಸಂದರ್ಭದಲ್ಲಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಕೊರೊನಾ ಪೂರ್ವದಲ್ಲಿ ಆರಂಭವಾದ ಈ ಪುಸ್ತಕದ ಕೆಲಸ ಕಾರಣಾಂತರಗಳಿಂದ ವಿಳಂಬವಾಗಿತ್ತು. ಆದರೆ ನಿಧಾನವಾದರೂ ಪ್ರಧಾನವಾಗಿ ಮೂಡಿಬಂದಿದೆ ಎನ್ನಲು ಸಂತಸವಾಗುತ್ತಿದೆ. ಅದನ್ನು ನಿಮ್ಮ ಕೈಗಿಡುತ್ತಿದ್ದೇವೆ. ಅದನ್ನು ಕೊಂಡು ಓದಿ, ಅದರೊಳಗಿನ ಸತ್ವ ಮುನ್ನಲೆಗೆ ಬರಲಿ. ಎಲ್ಲ ಓದುಗ ಜ್ಞಾನಾಕಾಂಕ್ಷಿಗಳಿಗೆ ಈ ಪ್ರಯತ್ನ ಇಷ್ಟವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ನಾಡಿನೆಲ್ಲೆಡೆ ಎಲ್ಲರೂ ಇದನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂಬ ನಂಬಿಕೆ ನನ್ನದು. ಇದು ಎಲ್ಲರಲ್ಲಿ ಗೀತ ಪ್ರೀತಿ ಹುಟ್ಟಿಸಿ, ಬೆಳೆಸಿ ಹೆಮ್ಮರವಾಗಿಸಲಿ. ಸುಗಮ ಸಂಗೀತದ ಸಿರಿ ಡಾ. ಜಯಶ್ರೀ ಅರವಿಂದರ ಅಭಿನಂದನಾ ಗ್ರಂಥ ಎಲ್ಲ ಸಂಗೀತಾಸಕ್ತರ ಮನೆಮನಗಳನ್ನು ಸೇರುವಂತಾಗಲಿ ಎಂದು ಆಶಿಸುತ್ತೇನೆ.





# ಸಂಗೀತ ಸರಿಗಮ

**ಮುರಳಿಕೃಷ್ಣ ಬೆಳಾಲು**

*ಸಂಪಾದಕರು, ಕವಿ, ಸಾಹಿತಿ, ಪತ್ರಕರ್ತ*

ಸುಗಮ ಸಂಗೀತವೇ ಹಾಗೆ. ಎಲ್ಲ ಕ್ಲೇಶಗಳನ್ನು ಕಳೆದು ಮನಸ್ಸನ್ನು ಸುಗಮಗೊಳಿಸಿ ಮುದ ನೀಡುವಂತದ್ದು. ಚಿತ್ತಾಕರ್ಷಕ, ಭಾವಾನುಭವದ ಅಭಿವ್ಯಕ್ತಿಯ ರಸಬುತ್ತಿ. ಮನಸೂರೆಗೊಳ್ಳುವ ಅನುರಕ್ತಿಯ ಸ್ವರಶಕ್ತಿ.

ಇಂತಹ ಸುಗಮ ಸಂಗೀತದ ಹಾದಿಯಲ್ಲಿ ಸುಗಮವಾಗಿ ಸಾಗಿ ಬಂದು ಅದರ ಎಲ್ಲ ಒಂಬತ್ತು ಪ್ರಕಾರಗಳಲ್ಲೂ ಕೆಲಸ ಮಾಡಿ, ಎಲ್ಲ ದಿಗ್ಗಜರ, ಕವಿಗಳ, ಗಾಯಕ ಕಲಾವಿದರಿಂದ ಹಾಡಿಸಿದ ಹೆಗ್ಗಳಿಕೆ ಕರ್ನಾಟಕ ಕಲಾಶ್ರೀ ಡಾ.ಜಯಶ್ರೀ ಅರವಿಂದ್ ಅವರ ಬತ್ತಳಿಕೆಯಲ್ಲಿದೆ.

ಅವರು ಟಿ.ನರಸೀಪುರದ ಸಮೀಪದ "ಬೆಳ್ಳಿ ಜಗಲಿ ಮೋಳೆ" (ಈಗಿನ ಬಿಳಿ ಜಗಲಿ ಮೋಳೆ) ಎಂಬ ಕುಗ್ರಾಮದಲ್ಲಿ 1955ರ ಏಪ್ರಿಲ್ 26ರಂದು ಜನಿಸಿದರು. ಅವರ ತಾಯಿ ಜಾಗದೇಶಿ ರಂಗಾಚಾರ್ ಅವರ ಕೊನೆಯ ಪುತ್ರಿ ಶ್ರೀರಂಗನಾಯಕಿ, ತಂದೆ ಮೈಸೂರು ಅರಮನೆಯಲ್ಲಿ ವಿಶೇಷ ಸಂಸ್ಕೃತ ವಿದ್ವಾಂಸರೂ, ವಿದ್ವನ್ಮಣಿಗಳೂ ಆಗಿದ್ದ ದೇವನೂರು ನರಸಿಂಹಾಚಾರರ ದ್ವಿತೀಯ ಪುತ್ರ  ಗೋವಿಂದರಾಜಯ್ಯಂಗಾರ್.

ಆರಂಭದಲ್ಲಿ ಅವರ ತಾಯಿ ಹಾಡುತ್ತಿದ್ದ ಸ್ವರಚಿತ ಗೀತೆಗಳಲ್ಲದೆ, ಸಂಪ್ರದಾಯದ ಗೀತೆ, ಭಕ್ತಿಗೀತೆ ಎಲ್ಲವೂ ಅವರನ್ನು ಸಂಗೀತದತ್ತ ಸೂಜಿಗಲ್ಲಿನಂತೆ ಸೆಳೆದಿಟ್ಟಿತು. ಅದರತ್ತ ಜೋತು ಆತುಕೊಳ್ಳುವಂತೆ ಮಾಡಿತು. ಅನಂತರ ಹೈಸ್ಕೂಲಿಗೆ ಬಂದಾಗ ಸಂಗೀತವನ್ನು ಐಚ್ಛಿಕವಾಗಿ ತೆಗೆದುಕೊಂಡರು. ಅಲ್ಲಿಂದಲೇ ಶಾಸ್ತ್ರೀಯ ಸಂಗೀತ ಪಾಠವೂ ಆಯಿತು. ಅವರ ಹಳ್ಳಿಯಲ್ಲಿ ಏಕೋಪಾಧ್ಯಾಯ ಸರಕಾರಿ ಶಾಲೆ ಮಾತ್ರವಿತ್ತು. ಡಾ.ಜಯಶ್ರೀ ಅರವಿಂದ್ ಅವರು ಆ ಶಾಲೆಗೆ ಹೋಗುವುದಿಲ್ಲ ಎಂದು ಹಠ ಹಿಡಿದಿದು ಕುಳಿತಿದ್ದರಂತೆ!. ಹಾಗಾಗಿ ಮನೆಯೆ ಮೊದಲ ಪಾಠ ಶಾಲೆ, ಜನನಿ ತಾನೆ ಮೊದಲ ಗುರು, ಅವರ ತಾಯಿಯೇ ಮೊದಲ ಗುರುವಾಗಿ ಕಲಿಸಿದ್ದರು. ಅಲ್ಲಿ ಕೆಲವು ವರ್ಷ ವ್ಯಾಸಂಗ ಮುಗಿಸಿ ಬೆಂಗಳೂರಿಗೆ ಬಂದಿದ್ದರು.

ನಂತರ ಬೆಂಗಳೂರಿನ ಅವರ ತಾಯಿಯ ಅಕ್ಕ, ತಂಗಮ್ಮ ಕೃಷ್ಣಯ್ಯಂಗಾರ್ ಅವರ ಮನೆಯಲ್ಲಿದ್ದುಕೊಂಡು ಮುಂದಿನ ಶಾಲಾ ಜೀವನವನ್ನು ಮುಂದುವರಿಸಬೇಕಾಯಿತು. ಹಾಗಾಗಿ ಬೆಂಗಳೂರಿನ ಬಸವನಗುಡಿಯ ವ್ಯಾಪ್ತಿಯಲ್ಲಿರುವ ಹನುಮಂತನಗರದಲ್ಲಿನ ಭಾರತ ಮಾತಾ ವಿದ್ಯಾಮಂದಿರದಲ್ಲಿ 6ನೇ ತರಗತಿಯಿಂದ 10ನೇ ತರಗತಿ ವರೆಗೆ ವಿದ್ಯಾಭ್ಯಾಸ ಮುಂದುವರಿಸಿದರು. ಶಾಲೆಯಲ್ಲಿ ಅವರನ್ನು ಸಂದರ್ಶಿಸಿ, ಒಮ್ಮೆಲೇ ಆರನೇ ತರಗತಿಗೆ ಪ್ರವೇಶ ನೀಡಿದ್ದರಂತೆ. ಆಗ ಕಲಿಕೆಯಲ್ಲಿ ಮುಂದಿದ್ದವರಿಗೆ ಈ ರೀತಿ ಮಾಡಲು ಅವಕಾಶವಿತ್ತು. ಬಸವನಗುಡಿ ಅವರ ನೆಚ್ಚಿನ ತಾಣವಾಯಿತು. 1965 ರಿಂದ 69ರ ವರೆಗಿನ ಅವರ ವಿದ್ಯಾಭ್ಯಾಸದ ನೆನಪುಗಳು ಮಧುರವಾಗಿ ಅವರೊಂದಿಗೆ ಬೆಸೆದುಕೊಳ್ಳುವಂತೆ ಮಾಡಿತು.

ಅವರ ಅಮ್ಮ ಮತ್ತು ಅಪ್ಪ ಇಬ್ಬರೂ ಸಂಗೀತ ಸಾಹಿತ್ಯಾಭಿರುಚಿಯಿದ್ದವರು, ಅಜ್ಜಿ ರಂಗಲಕ್ಷ್ಮೀ ಶಾಸ್ತ್ರೀಯ ಸಂಗೀತ ಕಲಿತು ಗಾಯನದಲ್ಲಿ ಆಸಕ್ತಿ ಅಭ್ಯಾಸ ಇಟ್ಟುಕೊಂಡಿದ್ದರಲ್ಲದೆ, ತಮ್ಮ ಮಕ್ಕಳಿಗೂ ಶಾಸ್ತ್ರೀಯ ಸಂಗೀತ ಕಲಿಸಿದ್ದರು. ಹಾಗಾಗಿ, ಅವರಿಗೆ ಬಾಲ್ಯದಿಂದಲೂ, ಸಂಗೀತ ಒಡನಾಡಿಯಾಗಿಯೇ ಅನುಸರಿಸಿಕೊಂಡು ಬಂದಿತ್ತು.

ಶಾಲೆಯಲ್ಲಿ ಸೀಟು ಸಿಗಲೂ ಅವರಿಗೆ ಸಂಗೀತದ ಆಕರ್ಷಣೆಯೇ ಕಾರಣವಾಗಿತ್ತು ಎಂದರೆ ನಂಬಲೇ ಬೇಕು. ಗೋಪಾಲಕೃಷ್ಣಯ್ಯಂಗಾರ್ ಸಂದರ್ಶನದಲ್ಲಿ, ಅವರನ್ನು ಹಾಡಿಸಿ, ಶಹಭಾಷ್‌ಗಿರಿಯನ್ನು ಕೊಟ್ಟಿದ್ದಲ್ಲದೆ ಶಾಲೆಗೆ ಪ್ರವೇಶ ನೀಡಿದ್ದರು. ಅವರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ತೆರಳಿದರು. ಮುಂದೆ ಪಿಯುಸಿ ಓದುವಾಗ ಮೈಸೂರಿನ ಲಲಿತಕಲಾ ಕಾಲೇಜಿನಲ್ಲಿ ಮೈಸೂರು ಅರಮನೆಯ ಆಸ್ಥಾನ ಭರತನಾಟ್ಯ ಕಲಾವಿದೆ ವೆಂಕಟಲಕ್ಷ್ಮಮ್ಮ ಅವರಿಂದ ಭರತನಾಟ್ಯ ಅಭ್ಯಾಸವನ್ನೂ ಮಾಡಿದರು.



ನಂತರ ಮೈಸೂರಿನ ಮಾನಸ ಗಂಗೋತ್ರಿಗೆ ಬಂದ ಅವರು ಲಲಿತಕಲಾ ಕಾಲೇಜಿಲ್ಲಿ ಬಿ. ಮ್ಯೂಸಿಕ್‌ನಲ್ಲಿ ಪದವಿ ಪಡೆದರು. ಕಾರ್ಯಕ್ರಮಗಳನ್ನೂ ನೀಡತೊಡಗಿದರು. ತಮ್ಮ ಚಿಕ್ಕಮ್ಮನವರಿಂದ ವೀಣಾ ವಾದನವನ್ನು ಐದು ವರ್ಷಗಳ ಕಾಲ ಕಲಿತರು.

ತರುವಾಯ ಅವರು ಮೈಸೂರಿನಲ್ಲಿ ಐಚ್ಛಿಕ ಕನ್ನಡದಲ್ಲಿ ಎಂಎ ಪದವಿ ಪಡೆದರು. 1977–78ರಲ್ಲಿ ಮದ್ರಾಸ್ ವಿವಿಯಲ್ಲಿ ಪುತಿನ ಅವರ ರಾಮಾಯಣ ಗೀತರೂಪಕಗಳ ಮೇಲೆ ಎಂ.ಫಿಲ್ ಪದವಿ ಗಳಿಸಿದರು. ಅನಂತರ ಕೊಡಗಿನ ಗೋಣಿಕೊಪ್ಪದ ಕಾವೇರಿ ಪ್ರಥಮದರ್ಜೆ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇರಿದರು. ಇಲ್ಲಿದ್ದಾಗಲೇ ಅವರು ಅರವಿಂದ್ ಕಿಗ್ಗಾಲ್‌ರನ್ನು ವಿವಾಹವಾದರು.

ಕೊಡಗಿನ ಕಾವೇರಿ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿದ್ದಾಗ ಒಮ್ಮೆ ಸದಾಶಿವ ಕಿಗ್ಗಾಲರ ಮನೆಗೆ ಜಯಶ್ರೀ ಅವರು ಆಹ್ವಾನದ ಮೇರೆಗೆ ಆತಿಥಿಯಾಗಿ ಹೋಗಿದ್ದರು. ಆಗ ಜಯಶ್ರೀಯವರು ಹಾಡಿದ್ದು ಕೇಳಿ, ಅವರ ಗಾಯನ ಸುಧೆ ಮೆಚ್ಚಿ, ಈ ಸಂಗೀತ ಸರಸ್ವತಿಯೇ ನಮ್ಮ ಮನೆ ಸೊಸೆಯಾಗಬೇಕೆಂದು ತೀರ್ಮಾನಿಸಿದರು. ಇದೇ ಮುಂದೆ ಅವರು ಕಿಗ್ಗಾಲ್ ಕುಟುಂಬದ ಸೊಸೆಯಾಗಲು ನಾಂದಿಯಾಯಿತು. ಇದರಿಂದ ಜಯಶ್ರೀ ಅವರ ಜೀವನ ಪ್ರೀತಿಗೆ ರಾಗಸ್ವರಗಳು ಬೆರೆತಂತಾಯಿತು. ಮಾವನವರಾದ ಸದಾಶಿವ ಕಿಗ್ಗಾಲ್‌ರೇ, ಜಯಶ್ರೀ ಅರವಿಂದ್ ಅವರ ಸಂಗೀತ ಸರಿಗಮ ಬೆಸೆದು, ಮುನ್ನುಡಿ ಬರೆಯಲು ಕಾರಣರಾದರು. ಮಹಾ ಪೋಷಕರಾದರು. ಇದು ಅವರ ಸಂಗೀತದ ಬದುಕಿನ ಪಯಣಕ್ಕೆ ಬಲುದೊಡ್ಡ ದಾರಿಯನ್ನು ತೆರೆದುಕೊಳ್ಳುವಂತೆ ಮಾಡಿತು.

ಕೊಡಗಿನಲ್ಲಿಯೇ ಹುಟ್ಟಿ ಬೆಳೆದಿದ್ದ ಪತಿ ಅರವಿಂದರ ಪೂರ್ವಜರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು. ಕನ್ನಡಕ್ಕೆ ಸಾಹಿತ್ಯಕ್ಕೆ ವಿಶಿಷ್ಟವಾದ, ಸಣ್ಣಕತೆಗಳನ್ನು ನೀಡಿದ, ಕೊಡಗಿನ ಗೌರಮ್ಮ, ಖಗೋಳ ವಿಜ್ಞಾನಿಯಾಗಿದ್ದ ಜಿ.ಟಿ. ನಾರಾಯಣರಾವ್, ಪ್ರಸಿದ್ಧ ಕಾದಂಬರಿಗಳನ್ನು ನೀಡಿದ ಭಾರತೀಸುತ ಮುಂತಾದ ಮಹನೀಯರ ಕುಟುಂಬಕ್ಕೆ ಸೇರಿದವರಾಗಿದ್ದ, ಅರವಿಂದ್ ಕಿಗ್ಗಾಲ್ ಸದಾಶಿವ ಕಿಗ್ಗಾಲ್ ಮತ್ತು ದೇವಕಿ ಸದಾಶಿವ ಕಿಗ್ಗಾಲರ ಮೂರನೇ ಮಗ.

ಅರವಿಂದ್ ಅವರು ಪ್ರವೃತ್ತಿಯಲ್ಲಿ ಸಂಗೀತಜ್ಞರು, ವೃತ್ತಿಯಲ್ಲಿ ಧ್ವನಿತಂತ್ರಜ್ಞರು. ಪ್ರತಿಯೊಬ್ಬ ಯಶಸ್ವೀ ಪುರುಷನ ಹಿಂದೆ ಸ್ತ್ರೀಯೊಬ್ಬಳು ಇರುತ್ತಾಳೆ ಎಂಬುದು ಗಾದೆ. ಆದರೆ ಅವರ ಮಹತ್ತರ ಸಾಧನೆಗೆ ಅವರ ಹಿಂದೆ ಬೆನ್ನುಲುಬಾಗಿ ನಿಂತವರು ಮತ್ತಾರೂ ಅಲ್ಲ, ಅವರ ಪತಿ ಅರವಿಂದ್ ಕಿಗ್ಗಾಲ್. ಸ್ವತಃ ಕೊಳಲು, ಮ್ಯಾಂಡೊಲಿನ್ ಮೊದಲಾದ ವಾದ್ಯಗಳನ್ನು ನಿಷ್ಣಾತ ಪರಿಣತರಾಗಿದ್ದರೂ, ಜಯಶ್ರೀ ಅವರ ಎಲ್ಲ ಸಾಧನೆಗೆ ನೀರೆರೆದು ಪೋಷಿಸಿ ಅದಕ್ಕೆ ಬೇಕಾದ ಎಲ್ಲ ಬೆಂಬಲ ನೀಡಿದವರು.

ಜಯಶ್ರೀ ಅರವಿಂದ್ ಅವರ ಮಕ್ಕಳಾದ ಶ್ರೀರಕ್ಷಾ ಪ್ರಿಯಾರಾಮ್ ಮತ್ತು ಶ್ರೀಸೂಕ್ತಾ ಪಟ್ಟಾಭಿರಾಮನ್. ಅವರು ಸಹ ಹಾಡುವುದರಲ್ಲಿ ನಿಷ್ಣಾತರು. ಅದರಲ್ಲಿ ಶ್ರೀರಕ್ಷಾ ಪ್ರಿಯಾರಾಮ್ ಕನ್ನಡ ನಾಡಿನ ಮೇರು ಗಾಯಕರ ಸಾಲಿನಲ್ಲಿ ನಿಲ್ಲುವಂತಹ ಪ್ರತಿಭೆಯಾಗಿದ್ದಾರೆ. ಅರವಿಂದ್ ಅವರು ಓದಿದ್ದು ಮೆಕ್ಯಾನಿಕಲ್ (ಅಟೋಮೊಬೈಲ್) ಎಂಜಿನಿಯರಿಂಗ್ ಆದರೆ ಆಸಕ್ತಿ ಧ್ವನಿ ತಂತ್ರಜ್ಞಾನ. ಇದು ಅವರನ್ನು ಮುಂದೆ ಧ್ವನಿ ತಂತ್ರಜ್ಞರಾಗಿ ನಾಡಿನೆಲ್ಲೆಡೆ ಹೆಸರು ಗಳಿಸುವಂತೆ ಮಾಡಿತು.

ಪತಿಯ ಜತೆಗೂಡಿ 1980ರಲ್ಲಿ ಜಯಶ್ರೀ ಅರವಿಂದ್ ಅವರು 'ನಾದ ಲಹರಿ' ಕ್ಯಾಸೆಟ್ ರೆಕಾರ್ಡಿಂಗ್ ಎಂಬ ಸಂಗೀತದ ಸಂಸ್ಥೆಯನ್ನು ಆರಂಭಿಸಿದರು. ಅದರ ಮೂಲಕ 'ನವೋದಯ,' 'ನಾಕುತಂತಿ' ಮೊದಲಾದ ಧ್ವನಿಸುರುಳಿಗಳು ಹೊರಬಂದವು. ಜನಪದದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಅವರು ಅದರಲ್ಲಿ "ಆಡೋಣ ಬನ್ನಿ' ಎಂಬ ಧ್ವನಿಸುರುಳಿಲ್ಲಿ ತಾವೇ ಹಾಡಿ, ಬಿಡುಗಡೆ ಮಾಡಿದರು. ಇದಾದ ಮೇಲೆ ಅನಿವಾರ್ಯ ಕಾರಣಗಳಿಂದ ನಾದ ಲಹರಿ ಸಂಸ್ಥೆ ಮುಚ್ಚಬೇಕಾಗಿ ಬಂದಾಗ, ಬೆಂಗಳೂರಿನ ಹನುಮಂತನಗರದಲ್ಲಿ 1982–83ರಲ್ಲಿ ಅರವಿಂದ್ ಸ್ಟುಡಿಯೋ ಆರಂಭಿಸಿದರು. ಧ್ವನಿ ತಂತ್ರ್ಯಜ್ಞ ಪತಿ ಅರವಿಂದ್ ಕಿಗ್ಗಾಲ್ ಅವರ ಜತೆಗೂಡಿ ಅವರು ಆರಂಭಿಸಿದ ಈ ಸ್ಟುಡಿಯೋ ಎಲ್ಲೆಡೆ ಜನಪ್ರಿಯಗೊಂಡಿತು. ಅದಕ್ಕೆ ಮೊದಲು ಮದ್ರಾಸಿಗೆ ಹೋಗಿ ರೆಕಾರ್ಡಿಂಗ್ ಮಾಡಿಕೊಂಡು ಬರುತ್ತಿದ್ದ ಅನೇಕರು ಇಲ್ಲಿಗೇ ಬಂದು ಧ್ವನಿಮುದ್ರಣ ಗೊಳಿಸತೊಡಗಿದರು. ಅದಕ್ಕೆಲ್ಲಾ ಕಾರಣ ಕ್ರಿಯಾಶೀಲ, ಪ್ರಯೋಗಶೀಲ, ಸಂಗೀತದ ಅರಿವುಳ್ಳ ಧ್ವನಿ ತಂತ್ರಜ್ಞ ಅರವಿಂದ್ ಅವರ ಶ್ರಮವೇ ಆಗಿದೆ.

ತರುವಾಯ ಜಯಶ್ರೀ ಅರವಿಂದ್ ಅವರು ಅವರು 'ತೂಗೀರೆ ಉಯ್ಯಾಲೆ ಲಕ್ಷ್ಮೀ' "ನನ್ನಮ್ಮ ಬಹಳ ಚೆನ್ನ', ಬರುತಾನವ್ವ ಗಣಪ, "ತುಂಟ ಕೃಷ್ಣನ ಕಂಡರೆ ಹೇಳಿ' ಮುಂತಾದ ಗೀತ ಸಂಕಲನಗಳನ್ನು ರಚಿಸಿ ಹೊರತಂದರು. 'ಸುವ್ವಿ ಸುವ್ವಾಲೆ' ಅವರ ರಚನೆಯ ಭಾವಗೀತೆಗಳ ಸಂಕಲನ.



1996ರಲ್ಲಿ ಇವರು ಇವರೇ ಗೀತೆ ರಚಿಸಿ, ಸಂಗೀತ ನೀಡಿದ ಧ್ವನಿಸುರುಳಿ 'ಚೆಲ್ಲಾಟಗಾರ ಮಾದಪ್ಪ' ನೂತನ ದಾಖಲೆಯ ಅಲೆಯನ್ನೇ ಸೃಷ್ಟಿಸಿತು. ಮೇರುನಟ ಡಾ.ರಾಜ್ ಅದಕ್ಕೆ ಧ್ವನಿ ನೀಡುವ ಮೂಲಕ ಅದರ ಸೊಬಗನ್ನು ಹೆಚ್ಚಿಸಿದ್ದರು. ಅದರ ಮಹತ್ವ ಹೆಚ್ಚುವಂತೆ ಮಾಡಿ ಜೀವಕಳೆ ತಂದುಕೊಟ್ಟಿದ್ದರು. ಡಾ.ರಾಜ್ ಕುಮಾರ್ ಧ್ವನಿಯಲ್ಲಿ ನಾಲ್ಕು ಆಲ್ಬಂಗಳು ಜನಪದ ಶೈಲಿಯಲ್ಲಿ ಹೊರಬಂದವು. "ಮಲೆಮಾದೇಶ್ವರ, ನಂಜುಂಡೇಶ್ವರ, ಮೈಸೂರಿನ ಚಾಮುಂಡೇಶ್ವರಿ, ಭೈರವೇಶ್ವರ' ದೇವರ ಬಗ್ಗೆ ಜಯಶ್ರಿ ಅವರೇ ಗೀತರಚನೆ ಮಾಡಿ, ಸಂಗೀತ ನಿರ್ದೇಶನ ನೀಡಿ, ಸುಮಾರು 36 ಗೀತೆಗಳಿಗೆ ಅವರು ಹಾಡಿಸಿದ್ದು, ಅವೆಲ್ಲವೂ ಜನಮಾನಸದಲ್ಲಿ ಅಚ್ಚೊತ್ತಿ ಉಳಿದುಕೊಂಡಿವೆ. "ಚೆಲ್ಲಾಟಗಾರ ಮಾದಪ್ಪ', "ಸಂಪನ್ನಗಾರ ಮಾದಪ್ಪ', "ಬೆಡಗಾರ ನಂಜುಂಡು', "ಛಲಗಾತಿ ಚಾಮುಂಡಿ', "ಅನ್ನದಾನಿ ಭೈರೂಪ" ಇವು ಜಯಶ್ರೀ ಅವರೇ ರಚಿಸಿ ಸಂಯೋಜಿಸಿದ, ಹಾಡುಗಳ ಧ್ವನಿಸುರುಳಿಗಳಾಗಿದ್ದು, ಡಾ.ರಾಜ್ ಧ್ವನಿಯಲ್ಲಿ ಮೂಡಿಬಂದವು. ಜನಮಾನಸವನ್ನು ಆವರಿಸಿಕೊಂಡವು.

"ಮಲ್ಲೆ ಮಲ್ಲಿಗೆ, ಆಮೋದ, ಚುಕ್ಕಿಬಳೆ, ಒಲುಮೆ, ಬಾಸಖಿ, ಹೂಜೇನು, ಮಧುಕೋಗಿಲೆ, ನಿನ್ನ ಬಾಂದಳದಂತೆ' 'ಸಖಿ', 'ಚೇತನ', ಮೊದಲಾದ ಭಾವಗೀತೆಗಳ ಧ್ವನಿಸುರುಳಿಗಳು ಜಯಶ್ರೀ ಅರವಿಂದ್ ಅವರ ಜನಪ್ರಿಯತೆಯನ್ನು ಹೆಚ್ಚಿಸಿತು.

ಅಲ್ಲದೆ 2000ನೇ ಇಸವಿಯಲ್ಲಿ ಪುಸ್ತಕ ಪ್ರಾಧಿಕಾರದ 'ಪುಸ್ತಕ ಸೊಗಸು' ಪ್ರಶಸ್ತಿ ಅವರ 'ತುಂಟ ಕೃಷ್ಣನ ಕಂಡರೆ ಹೇಳಿ' ಕವನ ಸಂಕಲಕ್ಕೆ ಬಂದಿತು. 2002ರಲ್ಲಿ ಅವರ "ಸುಗಮ ಸಂಗೀತ ಒಂದು ಸಮಗ್ರ ಅಧ್ಯಯನ' ಎಂಬ ಸಂಶೋಧನಾ ಗ್ರಂಥಕ್ಕೆ ಜಯಶ್ರೀ ಅರವಿಂದ್ ಅವರಿಗೆ ಹಂಪಿ ವಿಶ್ವವಿದ್ಯಾಲಯ ಡಿ.ಲಿಟ್ ಪದವಿ ನೀಡಿ ಗೌರವಿಸಿತು.

ಸಂಗೀತ ಕ್ಷೇತ್ರದ ಮಹನೀಯರಾದ ಪದ್ಮಚರಣ್, ಪಿ.ಕಾಳಿಂಗ್ ರಾವ್ (ಕನ್ನಡ ಸಂಸ್ಕೃತಿ ಇಲಾಖೆ ಮತ್ತು ಸಂಗೀತ ನೃತ್ಯ ಅಕಾಡಮಿ) ಅವರ ಕುರಿತ ಅಧ್ಯಯನ ಮಾಡಿ ಪುಸ್ತಕಗಳನ್ನು ರಚಿಸಿದ್ದು ಅವರ ಜೀವನ ಸಾಧನೆಗಳನ್ನು ಎಲ್ಲರಿಗೂ ತಿಳಿಯುವಂತೆ ಮಾಡಿದ್ದಾರೆ. ಎಚ್‌ಎಂವಿ ಸಂಗೀತ ಕಂಪನಿಯ ಸಂಸ್ಥಾಪಕರಾದ ಎಚ್.ಎಂ.ಮಹೇಶ್ ಅವರ ಜೀವನ ಚರಿತ್ರೆಯನ್ನು "ಸಂಗೀತಯಾನ' ಎಂಬ ಪುಸ್ತಕದಲ್ಲಿ ಹಿಡಿದಿಟ್ಟಿದ್ದು, ಅದನ್ನು ಅಂಕಿತ ಪುಸ್ತಕ ಪ್ರಕಾಶನದವರು ಹೊರತಂದಿದ್ದಾರೆ.

ಸಾಯಿರಕ್ಷಾ ಸಂಸ್ಥೆ ತಯಾರಿಸಿದ 2010-11ರಲ್ಲಿ ಹೊರಬಂದ 'ಒಂದೂರಲ್ಲಿ' ಮಕ್ಕಳ ಚಲನಚಿತ್ರಕ್ಕೆ ಇವರು ನೀಡಿದ ಸಂಗೀತ ನಿರ್ದೇಶನಕ್ಕಾಗಿ ಕರ್ನಾಟಕ ರಾಜ್ಯ ಸರಕಾರ ಅತ್ಯುತ್ತಮ ಸಂಗೀತ ನಿರ್ದೇಶಕಿ ಪ್ರಶಸ್ತಿ ನೀಡಿ ಗೌರವಿಸಿದ್ದು ಮಹತ್ವದ ಸಂಗತಿಯಾಗಿದೆ.

ಅಲ್ಲದೆ 2020ರಲ್ಲಿ ಮುಂಬೈಯಲ್ಲಿ ನಡೆದ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ 17ನೇ ಸುಗಮ ಸಂಗೀತ ಸಮ್ಮೇಳನದ ಅಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿದ ಕೀರ್ತಿಯೂ ಕರ್ನಾಟಕ ಕಲಾಶ್ರೀ ಡಾ.ಜಯಶ್ರೀ ಅರವಿಂದರಿಗೆ ಸಲ್ಲುತ್ತದೆ. ದೂರದರ್ಶನದ ಚಂದನ ಟಿವಿಯಲ್ಲಿ "ಶುಭೋದಯ ಕರ್ನಾಟಕ', ಈಟಿವಿಯಲ್ಲಿ "ನನ್ನ ಹಾಡು ನನ್ನದು' ಎರಡು ಕಂತುಗಳಲ್ಲಿ ಪ್ರಸಾರಗೊಂಡಿದೆ. ಅಲ್ಲದೆ ಪವರ್ ಟಿವಿಯಲ್ಲಿ "ಯಜಮಾನಿ' ಕಾರ್ಯಕ್ರಮದಲ್ಲೂ ಅವರ ಸಂದರ್ಶನ ಮೂಡಿಬಂದಿದೆ.

ಇಷ್ಟೇ ಅಲ್ಲ. ಪಿ.ಕಾಳಿಂಗ್ ರಾವ್ ಅವರ ಜನ್ಮದಿನೋತ್ಸವ ಆಚರಣೆ ಅಂಗವಾಗಿ 2018ರಿಂದಲೂ ಫೇಸ್ಬುಕ್ ನೇರ ಪ್ರಸಾರದ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದ್ದಾರೆ. ಕೊರೋನಾ ಕಾಲಘಟ್ಟದಲ್ಲಿ ಫೇಸ್ಬುಕ್ ಲೈವ್ ಮೂಲಕ ಅದನ್ನುಮುಂದುವರಿಸುವ ಮೂಲಕ ಸಾವಿರದ ನೂರಕ್ಕೂ ಹೆಚ್ಚು ಕಲಾವಿದರಿಗೆ ಹಾಡಲು ಅವಕಾಶ ನೀಡುವ ಮೂಲಕ ಅವರ ಪ್ರತಿಭೆಗಳನ್ನು ವಿಶ್ವಾದ್ಯಂತ ಬೆಳಗುವಂತೆ ಮಾಡಿದ್ದಾರೆ. ಸುಮಾರು 60 ವರ್ಷಗಳಿಂದ ಸಂಗೀತ ಕ್ಷೇತ್ರದಲ್ಲಿ ಅವಿರತ ಸೇವೆ ಸಲ್ಲಿಸುತ್ತಾ ಬಂದಿರುವ ಡಾ. ಜಯಶ್ರೀ ಅರವಿಂದ್ ಅವರಿಗೆ ಸುಮಾರು ಆರುನೂರಕ್ಕೂ ಹೆಚ್ಚು ಪ್ರಶಸ್ತಿ ಸನ್ಮಾನಗಳನ್ನು ನೀಡುವ ಮೂಲಕ ವಿವಿಧ ಸಂಘ ಸಂಸ್ಥೆಗಳು ಗೌರವಿಸಿವೆ.

2021ರಲ್ಲಿ ಸುಗಮ ಸಂಗೀತ ಗಂಗಾ ವಾರ್ಷಿಕ ಪ್ರಶಸ್ತಿ, ಸ್ವರ ಶ್ಯಾಮಲಾ ಪ್ರಶಸ್ತಿ, 2022ರಲ್ಲಿ ಟೊರಾಂಟೋ ಪುರಂದರ ಪ್ರತಿಷ್ಠಾನದಲ್ಲಿ ಉಪನ್ಯಾಸ ನೀಡಿದ್ದು, ಅವರ ಸಂಗೀತ ಸಾಹಿತ್ಯದಲ್ಲಿ ಸುಮಾರು 130ಕ್ಕೂ ಹೆಚ್ಚು ಗಾಯಕರು ಹಾಡಿರುವುದು ಹೆಮ್ಮೆಯ ಸಂಗತಿಯಾಗಿದೆ. ಅಲ್ಲದೆ **'ಕಲಾಶ್ರೀ ಡಾ. ಜಯಶ್ರೀ ಅರವಿಂದ್'** ಯೂಟ್ಯೂಬ್ ಚಾನಲ್‌ನಲ್ಲಿ ಇವರ ಸಮಗ್ರ ಹಾಡುಗಳು ಲಭ್ಯವಿವೆ. ಕರ್ನಾಟಕ ಕಲಾಶ್ರೀ ಜಯಶ್ರೀ ಅವರ ಸಂಗೀತ ಸಾಧನೆ ಗಮನಾರ್ಹ. ಅದರ ಜೀವನದ ಹಲವು ಮಜಲುಗಳನ್ನು 'ಯೂಟ್ಯೂಬ್' ಸಂದರ್ಶನದ ಮೂಲಕ ಟೋಟಲ್ ಕನ್ನಡ ವಾಹಿನಿಯವರು 36 ಕಂತುಗಳಲ್ಲಿ ಪ್ರಸಾರ ಮಾಡಿದ್ದಾರೆ. ಹೀಗೆ



ಸಂಗೀತದ ಹಾದಿಯಲ್ಲಿ ಲೀಲಾಜಾಲವಾಗಿ ಸುಗಮವಾಗಿ ನಡೆದು ಬಂದು, ಅದರಲ್ಲಿ ಶಿಖರ ಸಾಧನೆ ಮಾಡಿದ ಪ್ರತಿಭಾನ್ವಿತ ಮಹಿಳೆಯಾಗಿ ಕರ್ನಾಟಕ ಕಲಾಶ್ರೀ ಡಾ.ಜಯಶ್ರೀ ಅರವಿಂದ್ ಕಂಡುಬರುತ್ತಾರೆ.

ಅವರು ಒಬ್ಬರು ಗೃಹಿಣಿಯಾಗಿ, ಸಂಗೀತದ ಎಲ್ಲಾ ಮಜಲುಗಳನ್ನು ಅಧ್ಯಯನ ಮಾಡಿ ಅದನ್ನು ಕರತಲಾಮಲಕವನ್ನಾಗಿಸಿಕೊಂಡದ್ದು ಅವರ ಶ್ರಮಸಾಧನೆ ಎಂದೇ ಹೇಳಬೇಕು. ಸಂಗೀತ ಸಂಯೋಜನೆ, ಗಾಯನ, ಸಾಹಿತ್ಯ ರಚನೆ, ಉದಯೋನ್ಮುಖ ಗಾಯಕರನ್ನು ಪ್ರೋತ್ಸಾಹಿಸಿ ಬೆಳಕಿಗೆ ತರುವ ಪರಿ ಅನನ್ಯ. ಎಂಟು ಭಾಷೆಗಳಲ್ಲಿ ಸುಮಾರು ಐದು ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಧ್ವನಿಮುದ್ರಣ ಮಾಡಿರುವುದಲ್ಲದೆ, ಐದು ನೂರಕ್ಕೂ ಹೆಚ್ಚು ಧ್ವನಿಸುರುಳಿಗಳಿಗೆ ಸಂಗೀತ, ಸಾಹಿತ್ಯ ರಚಿಸಿದ ಹೆಗ್ಗಳಿಕೆ ಅವರದು. ಅವರ ಸಂಗೀತದ ಸಾಧನೆಗಾಗಿ ಸಂಗೀತ ನೃತ್ಯ ಅಕಾಡೆಮಿ "ಕರ್ನಾಟಕ ಕಲಾಶ್ರೀ' ಪ್ರಶಸ್ತಿ ನೀಡಿ ಗೌರವಿಸಿದ್ದು ಅವರ ಅವರ ಸಾಧನೆಗೆ ಸಿಕ್ಕ ಮನ್ನಣೆಯಾಗಿದೆ.

ಡಾ. ಜಯಶ್ರೀ ಅರವಿಂದ್ ಅವರ ಹೆಸರಿನಲ್ಲೇ ಜಯವಿದೆ. ಕಮಲದಂತಹ ಮನಸ್ಸಿದೆ. ಅವರು ಸಂಗೀತ ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಲ್ಲೂ ದುಡಿದಿದ್ದಾರೆ. ಹಲವರಿಗೆ ಆಶ್ರಯದಾತರಾಗಿ ಬೆಳೆಸಿ ಬೆಳಕಿಗೆ ತರುವ ಮೂಲಕ ಹಲವರಿಂದ ಅಮ್ಮಾ ಎಂದು ಕರೆಸಿಕೊಳ್ಳುವ 'ಮಾತೃ ಹೃದಯಿ' ಎಂಬುದು ಸಂತಸದ ವಿಷಯ. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಗಮಕ ಸಂಗೀತ , ಜನಪದ ಸಂಗೀತ, ಚಿತ್ರ ಸಂಗೀತ, ಸಂಪ್ರದಾಯದ ಗೀತೆಗಳು, ಭಕ್ತಿ ಸಂಗೀತ, ಸುಗಮ ಸಂಗೀತ ಹೀಗೆ ಎಲ್ಲದಕ್ಕೂ ನೀರಿನಂತೆ ಹೊಂದಿಕೊಳ್ಳುತ್ತದೆ. ಅವರ ಪ್ರತಿಭೆ, ಜ್ಞಾನಕ್ಕೆ ಹಿಡಿದ ಕನ್ನಡಿ ಇದು.

ಕಲಾಶ್ರೀ ಡಾ.ಜಯಶ್ರೀ ಅರವಿಂದ್ ಅವರು ಹಾಡಿಸದ ಮೇರು ಗಾಯಕರಿಲ್ಲ. ಅವರ ಸಂಗೀತ ಸಂಯೋಜನೆಯ ಗೀತೆಗಳಿಗೆ ಡಾ.ರಾಜ್‌ಕುಮಾರ್, ಎಸ್.ಪಿ. ಬಾಲಸುಬ್ರಹ್ಮಣ್ಯ, ಎಸ್.ಜಾನಕಿ, ವಾಣಿ ಜಯರಾಂ, ಪಿ.ಸುಶೀಲಾ, ಜೇಸುದಾಸ್, ಮೈಸೂರು ಅನಂತಸ್ವಾಮಿ, ಸಿ ಅಶ್ವತ್ಥ್, ರತ್ನಮಾಲಾ ಪ್ರಕಾಶ್, ವಿದ್ಯಾಭೂಷಣ, ನರಸಿಂಹನಾಯಕ್, ಸ್ವರ್ಣಲತಾ, ಕವಿತಾ ಕೃಷ್ಣಮೂರ್ತಿ, ಕಸ್ತೂರಿಶಂಕರ್, ಬಿ.ಆರ್.ಛಾಯಾ, ಉನ್ನಿಕೃಷ್ಣನ್, ಉನ್ನಿಮೆನನ್, ರಾಧಿಕಾ ತಿಲಕಂ, ಶಶಿಧರ್‌ಕೋಟೆ, ಅಜಯ್ ವಾರಿಯರ್, ಎಂ.ಡಿ.ಪಲ್ಲವಿ, ಸುಪ್ರಿಯಾ, ಸುನೀತಾ, ಮಂಗಳಾರವಿ, ದಿವ್ಯಾರಾಘವನ್, ನಂದಿತಾ, ರಾಜೇಶ್‌ಕೃಷ್ಣನ್, ಕೃಷ್ಣ ಚಂದಿರ್, ರಾಜ್ ಕುಮಾರ್‌ಭಾರತಿ, ಸಂಗೀತಾ ಕಟ್ಟಿ, ಇಂದೂ ವಿಶ್ವನಾಥ್, ಮಾಲತಿ ಶರ್ಮಾ, ಮಂಜುಳಾ ಗುರುರಾಜ್, ಚಂದ್ರಿಕಾ ಗುರುರಾಜ್ ಮೊದಲಾದವರು ಧ್ವನಿಯಾಗುವ ಮೂಲಕ ಜೀವತುಂಬಿದ್ದಾರೆ.

ಚಲನಚಿತ್ರ ರಂಗದ ಭೀಷ್ಮ ಜಿ.ವಿ. ಅಯ್ಯರ್ ಅವರ ನಾಲ್ಕೂ ಭಾಷೆಗಳ (ಕನ್ನಡ, ತಮಿಳು, ಹಿಂದಿ, ಮಲಯಾಳಂ) ಕೃಷ್ಣಲೀಲಾ ಚಿತ್ರಕ್ಕೆ ಇವರು ಸಂಗೀತ ಸಂಯೋಜನೆಯನ್ನೂ ಮಾಡಿದ್ದಾರೆ. ಅಲ್ಲದೆ ಕಲಾವಿದರಾಗಿ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪುತ್ತೂರು ನರಸಿಂಹನಾಯಕ್, ರಮೇಶ್ಚಂದ್ರ, ಉದಯ್ ಅಂಕೋಲ, ಯಶವಂತ್ ಹಳಿಬಂಡಿ, ಎಂ.ಎಸ್. ಗಿರಿಧರ್, ಶ್ರೀಹರಿ ರಾವ್ ಜಿ.ಎನ್, ಶ್ರೀರಕ್ಷಾ ಅರವಿಂದ್, ಕೆ.ಎಸ್.ಸುರೇಖಾ ಮೊದಲಾದವರ ಪ್ರತಿಭೆಯನ್ನು ಬೆಳಕಿಗೆ ತಂದು ಅದಕ್ಕೆ ಮೆರುಗು ಹೆಚ್ಚುವಂತೆ ಮಾಡಿದವರು ಡಾ. ಜಯಶ್ರೀ ಅರವಿಂದ್.

200ಕ್ಕೂ ಹೆಚ್ಚು ಶಿಶುಗೀತೆಗಳಿಗೆ ಸಂಗೀತ ಜಯಶ್ರೀ ಅರವಿಂದ್ ಅವರು ನೀಡಿದ್ದಾರೆ. ಅಲ್ಲದೆ 1990ರಲ್ಲಿ ಚಂದನ ಟಿವಿಯಲ್ಲಿ ಪ್ರಸಾರವಾದ ಜಿ.ಪಿ. ರಾಜರತ್ನಂ ಅವರ ಕಂದನ ಕಾವ್ಯ, ಮಕ್ಕಳ ಧಾರಾವಾಹಿಗೆ ಸಂಗೀತ ನೀಡಿದ್ದಾರೆ. 'ಹಾಡುತ್ತೀವಿ ರಾಗ' ಎನ್ನುವ ಶೀರ್ಷಿಕೆಯಲ್ಲಿ ಕರ್ನಾಟಕದಾದ್ಯಂತ ಮಕ್ಕಳ ಗಾಯನ ಶಿಬಿರ ನಡೆಸಿ ಸಾವಿರಾರು ಮಕ್ಕಳಿಗೆ ತರಬೇತಿ ನೀಡಿ ಕಾರ್ಯಕ್ರಮ ನೀಡಿರುವುದು ಸ್ಮರಣಾರ್ಹ ಸಂಗತಿ.

ಹೀಗೆ ಅವರ ಸಾಧನೆಯ ಪ್ರವಾಹ ನಿಂತ ನೀರಲ್ಲ. ಅದು ಚಲಿಸುತ್ತಲೇ ಇದೆ. ಮತ್ತೆ ಮತ್ತೆ ಇನ್ನಷ್ಟು, ಮತ್ತಷ್ಟರ ಕಡೆಗೆ ದಾಪುಗಾಲು ಹಾಕುತ್ತಿದೆ. ಇದೀಗ ಅವರ 'ಗೀತ ಪ್ರೀತಿ ಸುಗಮ ಸಂಗೀತ ಸಿರಿ ಡಾ. ಜಯಶ್ರೀ ಅರವಿಂದ್' ಎಂಬ ಅವರ ಸಮಗ್ರ ಚಿತ್ರಣವುಳ್ಳ ಅಭಿನಂದನಾ ಗ್ರಂಥ ರೂಪದಲ್ಲಿ ಹೊರಬರುತ್ತಿದ್ದು, ಅದರ ಸಂಪಾದಕನಾಗಿರುವುದು ನನಗೆ ಖುಷಿಕೊಟ್ಟಿದೆ. ಇದು ಸುಗಮ ಸಂಗೀತ ಕ್ಷೇತ್ರದ ಆಸಕ್ತರಿಗೆ ಜ್ಞಾನಾಧಾರಿತ ಕೃತಿಯಾಗಿ ಮೂಡಿಬಂದಿದೆ ಎಂಬುದು ಗಮನಾರ್ಹ ವಿಷಯವಾಗಿದೆ.



# ಲಹರಿ – 2

## ಗೀತ ಪ್ರೀತಿ



## 'ನನ್ನ ಗೀತಪ್ರೀತಿ'

**ಕರ್ನಾಟಕ ಕಲಾಶ್ರೀ ಡಾ.ಜಯಶ್ರೀ ಅರವಿಂದ್**

*ಸುಗಮ ಸಂಗೀತಜ್ಞೆ*

ಹೀಗೊಂದು ಹಿರಿದಾದ ಅಧ್ಯಯನ ಗ್ರಂಥ ನನ್ನ ಬಗ್ಗೆ, ನನ್ನ ಗೀತೆಗಳ ಬಗೆಗೆ ಬರುತ್ತದೆ ಎಂಬ ಕಲ್ಪನೆಯಾಗಲಿ, ಯೋಜನೆಯ ಯೋಚನೆಯಾಗಲಿ ಕನಸಿನಲ್ಲಿಯೂ ಎಂದಿಗೂ ನನಗೆ ಬಂದಿರಲಿಲ್ಲ.

ಒಂದು ಮುಂಜಾನೆ, ಆತ್ಮೀಯ ಗೆಳೆಯರಾದ ಮುರಲಿಕೃಷ್ಣ ಬೆಳಾಲು ಅವರು ಕರೆಮಾಡಿ, ಮಾತನಾಡಿ ನನ್ನ ಬಗ್ಗೆ ಅಭಿನಂದನಾ ಗ್ರಂಥ ಒಂದನ್ನು ಹೊರತರುವ ಅವರ ಯೋಜನೆಯನ್ನು ನನ್ನ ಮುಂದಿಟ್ಟರು. ನನಗೆ ಅತ್ಯಂತ ಆಶ್ಚರ್ಯ, ಸಂಕೋಚ, ಭಯ ಎಲ್ಲವೂ ಒಮ್ಮೆಲೇ ಆಯಿತು.

ಭಯ ಸಂಕೋಚಗಳಿಂದ ಅಳುಕುತ್ತಲೇ ಹೇಗೋ ಒಪ್ಪಿಕೊಂಡೆ. ಸುಗಮಸಂಗೀತ ಕ್ಷೇತ್ರಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಅಧ್ಯಯನಶೀಲ ಲೇಖನಗಳೊಂದಿಗೆ ಸಮಸ್ತ ಸಂಗೀತ ಸಾಹಿತ್ಯಜ್ಞರ ಲೇಖನಗಳೊಂದಿಗೆ ಹೊರತರುವ ಅಧ್ಯಯನಶೀಲ ಗ್ರಂಥವೆಂದು ತಿಳಿದ ಮೇಲೆ ಸಮಾಧಾನವಾಯಿತು.

ಸೂತ್ರಧಾರಿಗಳು ಮುರಲಿಕೃಷ್ಣ ಅವರೇ. ನಾನು ಕೇವಲ ಪಾತ್ರಧಾರಿ ಅಷ್ಟೇ.

ನಾನು ಹಾಡಲು ಪ್ರಾರಂಭಿಸಿದ್ದು ನನ್ನ ಅಮ್ಮ ಹೇಳುವಂತೆ ಎರಡು ವರ್ಷಗಳ ಮಗುವಾಗಿದ್ದಾಗಲೇ ದೇವರ ಹಾಡು, ಸಂಪ್ರದಾಯದ ಹಾಡುಗಳು, ಜನಪದ, ಹಾಡುಗಳು, ಭಾವಗೀತೆ, ಹೀಗೆ ಎಲ್ಲಾಬಗೆಯ ಹಾಡುಗಳನ್ನು ಹಾಡುತ್ತಿದ್ದೆ.ಆರನೇ ತರಗತಿಯಲ್ಲಿರುವಾಗಲೇ "ಕನ್ನಡವೇ ಕಸ್ತೂರಿ ನಾನದರ ಪೂಜಾರಿ" ಎಂಬ ಗೀತೆ ಬರೆದೆ. ಅಲ್ಲಿಂದಲೇ ನನ್ನ 'ಗೀತ ಗಾನದ ಯಾನ' ಪ್ರಾರಂಭವಾಯಿತು.

ಹೈಸ್ಕೂಲ್‌ನಲ್ಲೂ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡಿದ್ದೆ. ಹೈಸ್ಕೂಲಿನಲ್ಲಿ ನೃತ್ಯ–ಸಂಗೀತ ಕಾರ್ಯಕ್ರಮಗಳಲ್ಲಿ ಅತ್ಯಂತ ಕ್ರಿಯಾಶೀಲಳಾಗಿ ಅದೇ ಪ್ರವೃತ್ತಿಯಾಗಿ ಬೆಳೆಯತೊಡಗಿತು.

ಮೈಸೂರು ವಿವಿಯ ಲಲಿತಾ ಕಲಾ ಕಾಲೇಜಿನಲ್ಲಿ ಕರ್ನಾಟಕ ಸಂಗೀತ ಮತ್ತು ಕನ್ನಡ ಸಾಹಿತ್ಯವನ್ನು ಐಚ್ಛಿಕವಾಗಿ ತೆಗೆದುಕೊಂಡು ಬಿ. ಮ್ಯೂಸಿಕ್ ಪದವಿ ಮತ್ತು ಕನ್ನಡ ಎಂ.ಎ. ಪಡೆದೆ. ಮದರಾಸು ವಿವಿಯಲ್ಲಿ (ಪುತಿನ ಅವರ ರಾಮಾಯಣ ಗೀತರೂಪಕ) ಎಂಫಿಲ್. ಪದವಿ ಪಡೆದೆ. ಕೊಡಗಿನ ಕಾವೇರಿ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿರುವಾಗ ಅರವಿಂದ್ ಕಿಗ್ಗಾಲ್ ಅವರೊಡನೆ ವಿವಾಹವಾಯಿತು. ಅರವಿಂದ್ ಕಿಗ್ಗಾಲ್ ಅವರ ತಂದೆ ಶ್ರೀ ಸದಾಶಿವ ಕಿಗ್ಗಾಲ್ ಅವರ ಅವಿರತ ಉತ್ತೇಜನ, ಪ್ರೋತ್ಸಾಹಗಳಿಂದ ನನ್ನೊಳಗಿದ್ದ ಗೀತೆಗಳು ಸುಮಧುರ ದನಿ ತೆಗೆದು ಹಾಡತೊಡಗಿದವು. ಪ್ರತಿ ಸಂಜೆ ಕಾಲೇಜಿನಿಂದ ಬಂದೊಡನೆಯೇ ಪ್ರಸಿದ್ಧ ಕವಿಗಳ ಕಾವ್ಯವಾಚನವನ್ನು ನಾನು ಮಾಡುತ್ತಿದ್ದೆ. ಮಾವ ಸದಾಶಿವರಾಯರ ಅಪೇಕ್ಷೆಯಂತೆ ಪ್ರತೀ ದಿನ ಇದು ನನ್ನ ದಿನಚರಿಯಾಗಿತ್ತು. ಇದು ನನ್ನ ಬದುಕಿಗೆ ಗೀತೆಗಳ ಅಮೃತ ವರ್ಷವೇ ಆಯಿತು.

ನಂತರ ಹಂಪಿ ವಿ.ವಿ.ಯಲ್ಲಿನ ಸುಗಮಸಂಗೀತದಲ್ಲಿ ಡಿ.ಲಿಟ್ ಎಲ್ಲವೂ ನನ್ನ ಗೀತಯಾನಕ್ಕೆ ಸುಂದರ ಸೋಪಾನಗಳಾದವು..

ಗೀತೆಗಳೇ ನನ್ನ ಉಸಿರಾದವು... ಬಾಂದಳವನ್ನು ಅಂಗೈಯಲ್ಲಿ ಹಿಡಿದುಕೊಡುವ, ಅರ್ಥದ ಪದರ ಪದರಗಳನ್ನು ಅತ್ಯಂತ ಸೂಕ್ಷ್ಮವಾಗಿ ತೆರೆಯುವ ಗೀತೆಗಳೇ ನನ್ನನ್ನು ಆವರಿಸಿಕೊಂಡುಬಿಟ್ಟವು.



ಅತಿಯಾದ ಮಾತಿಗಿಂತ ಮಿತಿಯಾದ, ಹಿತವಾದ ಗೀತೆಗಳೇ ನನ್ನಲ್ಲಿ ಜೀವನ ಪ್ರೀತಿಯನ್ನು ತುಂಬಿ ತುಳುಕಿಸಿದವು. ಪುಟ್ಟ ಕನ್ನಡಿಯಲ್ಲಿ ವಿಶ್ವದರ್ಶನ ಮಾಡಿಸುವ ಸಹಜ ಸುಂದರ ಗೀತೆಗಳು ನನ್ನ ಉಡಿ ತುಂಬಿದವು.

ಈ ಗೀತ ಪ್ರೀತಿಯೇ ನಾನು ಸಾವಿರಾರು ಗೀತೆಗಳನ್ನು ಬರೆಯಲು ರಾಗ ಸಂಯೋಜನೆ ಮಾಡಲು ಕಾರಣವಾಯಿತು.. ಗೀತೆಗಳು ಹುಟ್ಟುವುದೇ ಅಲ್ಲಿ ಪ್ರೀತಿಯ ಸೆಲೆ ಇದ್ದಾಗ...ಹಾಗೆಯೇ ಪ್ರೀತಿ ಹುಟ್ಟುವುದೇ ಅಲ್ಲಿ ಗೀತೆಯ ದನಿ ಇದ್ದಾಗ. ಕೇಳುಗರು ನನ್ನ ಗೀತೆಗಳನ್ನು ಪ್ರೀತಿಯಿಂದ ಬರಮಾಡಿಕೊಂಡರು..

ಯಾವುದೇ ಕವಿತೆ ಗೀತೆಯಾದಾಗಲೇ, ಅದರ ಹುಟ್ಟು ಸಾರ್ಥಕ.ಆದರೆ ಅದು ಸಫಲವಾಗಬೇಕಾದರೆ, ಬುದ್ಧಿಗಿಂತ, ಭಾವನೆಯೇ ಪ್ರಮುಖ ವಸ್ತುವಾಗಿರಬೇಕು.

ಮನಸ್ಸಿನ ಸೂಕ್ಷ್ಮ ಭಾವನೆಗಳ ಅಭಿವ್ಯಕ್ತಿ, ಗೀತದೊಂದಿಗೆ ಸಹಜ ಮೈತ್ರಿಯಲ್ಲಿದ್ದಾಗ ಆ ಗೀತೆ ಉತ್ತಮ ಗೀತೆಯಾಗುತ್ತದೆ.

ಸಂಗೀತ 'ಆಪಾತ ಮಧುರ. ಸಾಹಿತ್ಯ ಆಲೋಚನಾಮೃತ.. ಇವೆರಡರ ಅಪೂರ್ವ ಮಿಲನದಿಂದ ಗೀತವಾಗಿ ಅನಾವರಣವಾಗುತ್ತದೆ. ಸಂಗೀತದ ಸಂಚಾರದೊಂದಿಗೆ ಮಧುರವಾದ ಶಬ್ದಾವಳಿಗಳು ಸರಣಿಗೊಂಡು ಚೆಲುವಾದ ಗೀತೆಯಾಗುತ್ತದೆ. ಭಾವ, ಭಾಷೆ, ಮಧುರ ಗೇಯತೆಗಳ' ಅನ್ಯೋನ್ಯ ದಾಂಪತ್ಯವೇ ಅನನ್ಯ ಗೀತೆಯಾಗಿ ನಿನದಿಸುತ್ತದೆ.

ಸಂಗೀತವೆಂದರೆ ಅರ್ಥದ ಭಾವನೆಗಳ ಅಕ್ಷಯ ಪಾತ್ರೆಯಂತೆ. ಗೋಚರಕ್ಕಿಂತಾ ಹೆಚ್ಚು ಅಗೋಚರ. ಒಮ್ಮೆ ಸಿದ್ಧಿಯಾದರೆ ಸಾಕು. ಮೊಗೆದಷ್ಟೂ ಅರ್ಥದ ಅಮೃತಧಾರೆ ಉಕ್ಕಿ ಹರಿಯುತ್ತದೆ..

ಸಾಹಿತ್ಯ, ಸಂಗೀತ, ಕಲೆ, ಇವು ಸಂಸ್ಕೃತಿಯ ಸಮೃದ್ಧಿಯ ಸಂಕೇತ. ಇವುಗಳಿಲ್ಲದ ನಮ್ಮ ಬಾಳಿಗೆ ಯಾವ ಅರ್ಥವೂ ಇಲ್ಲ ಎನ್ನಬಹುದು. ಪ್ರಸಿದ್ಧ ಇಂಗ್ಲೀಷ್ ನಾಟಕಕಾರನಾದ ಶೇಕ್ಸ್‌ಪಿಯರ್, "ಸಂಗೀತವನ್ನು ಇಷ್ಟ ಪಡದ ವ್ಯಕ್ತಿ ನಂಬಿಕೆಗೆ ಅರ್ಹನಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಇದು ನಮ್ಮ ವ್ಯಕ್ತಿತ್ವವನ್ನು ಉನ್ನತಮಟ್ಟಕ್ಕೇರಿಸುವ ಸಂಗೀತದ ಮಹತ್ವವನ್ನು ಎತ್ತಿ ಹಿಡಿಯುತ್ತದೆ. ನಮ್ಮ ಬದುಕೇ ವಿವಿಧ ರಸಪಾಕಗಳ ಭಾವಗೀತೆಯಾಗಿದೆ.

ವಿಭಿನ್ನ ಅನುಭವಗಳನ್ನು ಕಲಿಸುವ ಪಾಠಶಾಲೆಯಾಗಿದೆ. ಬದುಕಿನಲ್ಲಿ ಬರುವ ಎಲ್ಲ ಪರಿಸ್ಥಿತಿ ಪರೀಕ್ಷೆಗಳಿಗೆ ತಲೆಯೊಡ್ಡಿ ಎದುರಿಸಬೇಕಾದ ಸ್ಥೈರ್ಯ, ಛಲ ನಮಗಿರಬೇಕು. ಎದುರು ಬಂದ ಸವಾಲನ್ನು ಸಹನೆ ಮತ್ತು ಸಾಮರಸ್ಯದಿಂದ ಸಮನ್ವಯ ಭಾವದಿಂದ ಸ್ವೀಕರಿಸುವ ಮನಸ್ಸು ನಮಗಿರಬೇಕಾಗಿದೆ.

ನಮ್ಮ ಬದುಕಿನಲ್ಲಿರುವ ಭ್ರಮೆಗಳನ್ನು ಅಡಗಿಸಲು, ನಮ್ಮೊಳಗಿನ ಅಹಂಕಾರವನ್ನು ದಮನಿಸಲು ನಿರ್ಮಲವಾದ ಮಧುರ ಗೀತೆಗಳು ಇಂದು ಅತ್ಯವಶ್ಯಕವಾಗಿ ಬೇಕಾಗಿದೆ.

ದೈನಂದಿನ ಸಾಂಸಾರಿಕ ಸಮಸ್ಯೆಗಳು ನಮ್ಮನ್ನು ಬಾಧಿಸುವಾಗ,ನಿಂತ ನೀರು ಕೊಳೆಯುವಂತೆ ಚಿಂತೆಗಳು ನಮ್ಮನ್ನು ಆವರಿಸಿರುವಾಗ ಹಗುರವಾದ, ಸುಮಧುರವಾದ, ಗೀತೆಗಳು ನಮ್ಮ ಮನಸ್ಸನ್ನು ಅರಳಿಸುತ್ತವೆ. ಜೀವಕ್ಕೆ ಕವಿದಿರುವ ನಿರಾಶೆಯನ್ನು ಓಡಿಸಿ ಲವಲವಿಕೆಯನ್ನು ನೀಡುತ್ತವೆ. ಇದನ್ನೇ ಅರಿಸ್ಟಾಟಲ್ ನಾಟಕದ ಸಂಗೀತವನ್ನು ಕುರಿತು ಹೇಳುವಾಗ "ಉತ್ತಮ ಸಂಗೀತ ಮನಸ್ಸನ್ನು ಶುಚಿಗೊಳಿಸಿ, ಶೃಂಗರಿಸುತ್ತದೆ" ಎಂದಿದ್ದಾನೆ.

ಗೀತೆಗಳು ಕ್ಲಿಷ್ಟ ಮತ್ತು ಸಂಕೀರ್ಣ ಜಗತ್ತಿನ ಜಟಿಲತೆಯಿಂದ ದೂರ ಕೊಂಡೊಯ್ದು, ನಮ್ಮನ್ನು ಆನಂದಮಯವಾದ, ಪ್ರಸನ್ನವಾದ, ಪ್ರಶಾಂತವಾದ ಪ್ರೀತಿ ವಾತ್ಸಲ್ಯಗಳ ತುಂತುರು ಮಳೆಯಲ್ಲಿ ತೋಯಿಸುತ್ತದೆ.

ಇದು ನನ್ನ ಬದುಕಿನಲ್ಲಿ ನಾನು ಕಂಡ ಸತ್ಯ.. ನಿತ್ಯವೂ ಪುನರ್ಭವವಾಗುತ್ತಾ ಹೊಸ ಹೊಸ ಅರ್ಥದ ಮಜಲನ್ನು ತೋರುವ ಗೀತಗಳು ಸಮುದಾಯಗಳನ್ನು ಒಗ್ಗೂಡಿಸುತ್ತವೆ. ಜಾತಿ ಧರ್ಮ ಭೇದ ಭಿತ್ತಿಗಳ ಬೇಲಿಗಳನ್ನು ದಾಟುತ್ತವೆ

ಪ್ರತಿಯೊಬ್ಬ ಕೇಳುಗನ ಹೃದಯಕ್ಕೆ ಅತ್ಯಂತ ಹತ್ತಿರವಾಗುತ್ತಾ, ಅದು ಅವನದೇ ಜೀವನದ, ಅವನದೇ ಚಿಂತನೆಯ, ಅವನದೇ ಆಸೆ ಆಕಾಂಕ್ಷೆಗಳ ನಿರೂಪಣೆ ಎನಿಸಿ ಮನಸ್ಸನ್ನು ಆವರಿಸುತ್ತದೆ.



ಪದ್ಮವಿಭೂಷಣ
ಡಾ. ರಾಜ್‌ಕುಮಾರ್
ಅವರೊಂದಿಗೆ
ಡಾ. ಜಯಶ್ರೀ ಅರವಿಂದ್
ಮತ್ತು ಅರವಿಂದ್ ಕಿಗ್ಗಾಲ್

ಗಾನಕೋಗಿಲೆ
ಡಾ. ಎಸ್. ಜಾನಕಿ
ಮತ್ತು ಅವರ ಪತಿ
ಶ್ರೀ ರಾಮಪ್ರಸಾದ್
ಅವರೊಂದಿಗೆ
ಡಾ. ಜಯಶ್ರೀ ಅರವಿಂದ್ ದಂಪತಿ





ಗಾನಗಂಧರ್ವ ಪದ್ಮವಿಭೂಷಣ
ಡಾ. ಕೆ.ಜೆ. ಜೇಸುದಾಸ್
ಮತ್ತು ಅವರ ಪತ್ನಿ ಶ್ರೀಮತಿ ಪ್ರಭಾ ಜೇಸುದಾಸ್
ಅವರೊಂದಿಗೆ ಡಾ. ಜಯಶ್ರೀ ಅರವಿಂದ್
ಮತ್ತು ಅವರ ಮಕ್ಕಳಾದ
ಶ್ರೀರಕ್ಷಾ ಅರವಿಂದ್, ಶ್ರೀಸೂಕ್ತಾ ಅರವಿಂದ್

ಪದ್ಮವಿಭೂಷಣ
ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ
ಅವರೊಂದಿಗೆ
ಡಾ. ಜಯಶ್ರೀ ಅರವಿಂದ್ ದಂಪತಿ



# ಗೀತಪ್ರೀತಿ

## ಸುಗಮ ಸಂಗೀತ ಸಿರಿ

## ಡಾ. ಜಯಶ್ರೀ ಅರವಿಂದ್



ಜಯಶ್ರೀ ಅರವಿಂದ್ ಅವರ ಬಗ್ಗೆ ಮಾತಾಡಬೇಕೆಂದರೆ ಮಾತುಗಳೆಲ್ಲಿದೆ..? ಮಾತುಗಳೇ ಇಲ್ಲ, ಏನು ಮಾತನಾಡುವುದು. ಅಂತಹ ಪ್ರತಿಭೆಯನ್ನು ಕುರಿತು– **“she is great!, she is great!!, she is great!!!.** ಅವರು ಎಷ್ಟೆಷ್ಟು ಒಳ್ಳೊಳ್ಳೆಯ ಹಾಡುಗಳನ್ನು ಸತತವಾಗಿ ಇಷ್ಟು ವರ್ಷಗಳು ಒಂದು ದಿವಸವೂ ಬಿಡದೆ ಬರೆದಿದ್ದಾರೆ!, ಎಷ್ಟೆಲ್ಲಾ ಒಳ್ಳೊಳ್ಳೆಯ ಸಂಗೀತ ಸಂಯೋಜನೆಯನ್ನು ಮಾಡಿದ್ದಾರೆ!. ಅದ್ಭುತವೆನ್ನೋ ರಾಗ ಸಂಯೋಜನೆಯನ್ನು ಮಾಡಿದ್ದಾರೆ, ಅಷ್ಟೇ ಅಲ್ಲ. ಒಳ್ಳೊಳ್ಳೆಯ ಶ್ರೇಷ್ಠ ಗಾಯಕರನ್ನು ತಮ್ಮ ಗೀತೆಗಳಲ್ಲಿ ಹಾಡಿಸಿದ್ದಾರೆ.

ನಾನೂ ಸಹ ಅವರ ರಚನೆ, ಸಂಯೋಜನೆಯ ಬಹಳಷ್ಟು ಒಳ್ಳೊಳ್ಳೆಯ ಹಾಡುಗಳನ್ನು ಹಾಡಿದ್ದೇನೆ. ಎಲ್ಲವೂ ಎಂದೆಂದಿಗೂ ಮರೆಯಲಾರದ ಹಾಡುಗಳು. ಅವರ ಸಾಹಿತ್ಯ, ಸಂಗೀತ ಸಂಯೋಜನೆಯ ಅನೇಕ ಕ್ಯಾಸೆಟ್‌ಗಳಿಗೆ ಪ್ರಶಸ್ತಿ ಸಹ ಬಂದಿದೆ. ನಮ್ಮಿಬ್ಬರಿಗೂ, ‘ದುರ್ಗಾ ಬಂದಳು’ ಎನ್ನುವ ಕ್ಯಾಸೆಟ್ಟಿಗೆ ಒಟ್ಟಿಗೆ ಪ್ರಶಸ್ತಿ ಸಿಕ್ಕಿತ್ತು.

ನಾನು ಅವರ ನಿರ್ದೇಶನದಲ್ಲಿ ‘ಲಲಿತಾ ಸಹಸ್ರನಾಮ’ವನ್ನೂ ಸಹ ಹಾಡಿದ್ದೇನೆ. ಅವರ ಗೀತೆಗಳಲ್ಲಿ ಬಳಸಿದ ಸಂಸ್ಕೃತ ಪದಗಳ ಉಪಯೋಗ, ನಿಜಕ್ಕೂ ಅವರಿಗೆ ಸಂಸ್ಕೃತ ಭಾಷೆಯ ವಿದ್ವತ್ತನ್ನು ಮನಗಾಣಿಸಿತ್ತು. ಅಷ್ಟೇ ಅಲ್ಲ. ಅವರು ಸಂಸ್ಕೃತದಲ್ಲಿಯೂ ಹಾಡುಗಳನ್ನು ಬರೆದಿದ್ದಾರೆ. ಅವರ ಮುದ್ದು ಮಕ್ಕಳೂ ಸಹ ತುಂಬಾ ಚೆನ್ನಾಗಿ ಹಾಡುತ್ತಾರೆ. ಅವರ ಮಕ್ಕಳು ಹುಟ್ಟಿದಾಗಿನಿಂದಲೂ ಅವರನ್ನು ಚೆನ್ನಾಗಿ ಬಲ್ಲೆ, ಆದರೆ ಇಷ್ಟು ಚೆನ್ನಾಗಿ ಹಾಡ್ತಾರಂತ ನಾನು ನೆನೆಸಿರಲಿಲ್ಲ. ತುಂಬಾ ಚೆನ್ನಾಗಿ ಹಾಡುತ್ತಾರೆ.

ಅವರು ಇನ್ನೂ ಅನೇಕ ಹಾಡುಗಳನ್ನು ಬರೆದು, ಸಂಗೀತ ಸಂಯೋಜನೆ ಮಾಡಿ, ಪ್ರತಿಭಾನ್ವಿತ ಗಾಯಕರಿಂದ ಹಾಡಿಸಿ, ಹೊಸ ಗಾಯಕರನ್ನು ಪ್ರೋತ್ಸಾಹಿಸುತ್ತಿದ್ದಾರೆ. ನೂರಾರು ವರ್ಷಗಳು ಅವರು ಸಾಧನೆ ಮಾಡಲಿ ಅನ್ನೋದು ನನ್ನ ಆಸೆ. ಅವರು ಖಂಡಿತ ಮಾಡ್ತಾರೆ. ಆ ನಂಬಿಕೆ ನನಗಿದೆ. ನಾನು ಬಹುವಚನದಲ್ಲಿ ಅವರು ಅಂತ ಹೇಳಬಾರದು. ಯಾಕೆಂದರೆ ಆಕೆ ನನ್ನ ಬಂಗಾರದ ಮುದ್ದು ಮಗಳು, ನನಗೆ ಹುಟ್ಟಿದ ಮಗಳಾಗದಿದ್ರೆ ಏನು? ಅವಳು ಎಂದೆಂದಿಗೂ ನನಗೆ ಹುಟ್ಟಿದ ಮಗಳಂತೆಯೇ. ಅಷ್ಟು ಪ್ರೀತಿ ನನ್ನ ಮೇಲೆ ಅವರಿಗೆ, ನನಗೆ ಅವರ ಮೇಲೆ ಪ್ರೀತಿ. ನನ್ನ ಮಗಳು ಚೆನ್ನಾಗಿ ಬಾಳಬೇಕು. ಇನ್ನೂ ಅನೇಕ ಸಾಧನೆಗಳನ್ನು ಮಾಡುವ ಕೆಲಸ ಮಾಡುತ್ತಿರಬೇಕು. ಅವರು ಪತಿ ಅರವಿಂದ್, ಮಕ್ಕಳ ಜೊತೆ ನೂರು ವರ್ಷಗಳು ಚೆನ್ನಾಗಿ ಬಾಳಿ, ಅನೇಕ ಗೀತೆಗಳನ್ನು, ಸಂಯೋಜನೆ ಮಾಡುತ್ತಾ ಸಾಧನೆಯ ಹಾದಿಯಲ್ಲಿ ಜೀವನ ಕಳೆಯಬೇಕು ಅಂತ ನಾನು ಆಶೀರ್ವಾದ ಮಾಡುತ್ತೇನೆ.

**Best of luck, Best of luck.**



ಡಾ. ಎಸ್. ಜಾನಕಿ
ಪ್ರಖ್ಯಾತ ಜನಪ್ರಿಯ ಚಲನಚಿತ್ರ ಹಿನ್ನೆಲೆ ಗಾಯಕಿ

